بِسْمِ اللّٰهِ الرَّحْمٰنِ الرَّحِيْمِ    نَحْمَدُهٗ وَنُصَلِّيْ عَلٰى رَسُوْلِهِ الْكَرِيْمِ    وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 05

ಕನ್ನಡ

# ಬದರ್

ವಾರ ಪತ್ರಿಕೆ

WEEKLY BADAR QADIAN KANNADA

ಸಂಚಿಕೆ: 46

ವಾರ್ಷಿಕ ಶುಲ್ಕ ರೂ.600/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

14 ನವೆಂಬರ್ 2024, 14 ನಬುವ್ವತ್ 1403 ಹಿಜರಿ ಶಮ್‌ಸಿ,
11 ಜಮಾದಿಉಲ್ ಅವ್ವಲ್ 1445 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಸರ್ವಶಕ್ತನಾದ ಅಲ್ಲಾಹನು ಹುಝೂರ್ ಅವರಿಗೆ ದೀರ್ಘ ಮತ್ತು ಸಕ್ರಿಯ ಜೀವನವನ್ನು ನೀಡಲಿ ಮತ್ತು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ۔

## ಅಲ್ಲಾಹನ ಉಪದೇಶ

وَاَمَّا مَنْ اٰمَنَ وَعَمِلَ صَالِحًا فَلَهٗ جَزَآءَ ۨالْحُسْنٰى ۚ وَسَنَقُوْلُ لَهٗ مِنْ اَمْرِنَا يُسْرًا ﴿۸۹﴾

**(ಅಲ್ ಕಹಫ್: 89)**

**ಅಂದರೆ: ಯಾರು ವಿಶ್ವಾಸ ಹೊಂದಿ ಸತ್ಕರ್ಮಗೈಯ್ಯುತ್ತಾನೋ, ಅವನಿಗೆ (ಅಲ್ಲಾಹನಿಂದ) ಉತ್ತಮ ಪ್ರತಿಫಲವಿದೆ. ನಮ್ಮ ಆಜ್ಞೆಯಲ್ಲಿ ಸುಲಭವಾದುದನ್ನು ನಾವು ಅವನೊಡನೆ ಹೇಳುವೆವು.**

## ಪ್ರವಾದಿ ಮುಹಮ್ಮದ್[ಸ]ರವರ ಉಪದೇಶ

**ಪವಿತ್ರ ಖುರ್‌ಆನ್ ಏಳು ವಿಧಗಳಲ್ಲಿ ಅವತೀರ್ಣಗೊಂಡಿದೆ ಅದರಿಂದ ಅನುಕೂಲವಾದುದನ್ನು ನೀವು ಪಠಿಸಿರಿ**

**(2419)** ಹಝ್‌ರತ್ ಉಮರ್ ಬಿನ್ ಖತ್ತಾಬ್(ರ) ಅವರು ವರದಿ ಮಾಡುತ್ತಾರೆ ಅವರು ಹೇಳುತ್ತಾರೆ: ನಾನು ಹಝ್‌ರತ್ ಹಿಶಾಮ್ ಬಿನ್ ಹಕೀಮ್ ಬಿನ್ ಹಿಝಾಮ್(ರ) ಅವರಿಗೆ ನಾನು ಪಠಿಸುವ ವಿಧಾನಕ್ಕಿಂತ ವಿಭಿನ್ನ ರೀತಿಯಲ್ಲಿ ಸೂರಾ ಫುರ್ಖಾನ್ ಅನ್ನು ಪಠಿಸುವುದನ್ನು ಆಲಿಸಿದೆ. ಮತ್ತು ಅದನ್ನು (ಸೂರಾ) ಹಝ್‌ರತ್ ಪೈಗಂಬರ್(ಸ) ರವರು ನನಗೆ ಪಠಿಸಿದ್ದರು. ಮತ್ತು ನಾನು ಅವರ ಮೇಲೆ ದಾಳಿ ಮಾಡಬಹುದಿತ್ತು, ಆದರೆ ನಾನು ಅವರಿಗೆ ನಮಾಝನ್ನು ಸಂಪೂರ್ಣವಾಗಿ ನಿರ್ವಹಿಸುವ ತನಕ ಬಿಡುವು ನೀಡಿದೆ. ತದನಂತರ, ನಾನು ಅವರು ಧರಿಸಿದ್ದ ಮೇಲಂಗಿಯನ್ನು ಹಿಡಿದು ಎಳೆದು ಹಝ್‌ರತ್ ಪೈಗಂಬರ್(ಸ) ಅವರ ಕರೆತಂದು ಹೇಳಿದೆ: ನಾನು (ಸೂರತ್ ಅಲ್-ಫುರ್ಕಾನ್) ಅನ್ನು ನೀವು(ಸ) ನನಗೆ ಕಲಿಸಿದ ವಿಧಾನಕ್ಕೆ ವಿರುದ್ಧವಾಗಿ ಅದನ್ನು ಬೇರೆ ರೀತಿಯಲ್ಲಿ ಪಠಿಸುವುದನ್ನು ನಾನು ಕೇಳಿದ್ದೇನೆ. ಅದಕ್ಕೆ ಹಝ್‌ರತ್ ಪೈಗಂಬರ್(ಸ) ರವರು ನನಗೆ ಉದ್ದೇಶಿಸಿ ಹೇಳಿದರು: ಅವರನ್ನು ಬಿಟ್ಟುಬಿಡಿ. ನಂತರ ಅವರು(ಸ) ಅವರಿಗೆ ಹೇಳಿದರು: ಓದಿ. ಅದಕ್ಕೆ ಅವನು ಓದಿದನು. ಅವರು(ಸ) ಹೇಳಿದರು: ಅದೇ ರೀತಿ ಅವತೀರ್ಣಗೊಂಡಿದೆ. (ಆಗ ಅವರು ಹೇಳಿದರು:) ಪವಿತ್ರ ಖುರ್‌ಆನ್ ಏಳು ವಿಧಗಳಲ್ಲಿ ಅವತೀರ್ಣಗೊಂಡಿದೆ. ನಿಮಗೆ ಯಾವುದು ಸುಲಭವೋ ಹಾಗೆಯೇ ಪಠಿಸಿರಿ. **(ಸಹೀಹ್ ಬುಖಾರಿ, ಸಂಪುಟ-4, ಕಿತಾಬ್ ಅಲ್-ಖುಸುಮತ್, 2008 ಖಾದಿಯಾನ್ ಪ್ರಕಟಿತ)**

***ವಿಶೇಶ ಸೂಚನೆ*** "ಬದರ್" ವಾರಪತ್ರಿಕೆಯ ಚಂದಾದರರಲ್ಲಿ ತಮ್ಮ ಬಾಕಿ ಇರುವ ವಾರ್ಷಿಕ ಶುಲ್ಕವನ್ನು ಶೀಘ್ರವೇ ಪಾವತಿಸಲು ವಿನಂತಿ.
ಮೊಬೈಲ್ ಸಂಖ್ಯೆ: 9760468663 (ವ್ಯವಸ್ಥಾಪಕರು)

## ಲಕ್ಷಾಂತರ ಸಂತರ ಸಾಕ್ಷ್ಯಗಳಿವೆ ಮತ್ತು ನಂತರ ಅವರು ತಮ್ಮ ಪ್ರಾಯೋಗಿಕ ಸ್ಥಿತಿಯಿಂದ ಹೇಳಿದ್ದಾರೆ ಮತ್ತು ಹೃದಯದ ರಕ್ತದಿಂದ ಸಾಕ್ಷ್ಯವನ್ನು ಬರೆದಿರುವುದೇನೆಂದರೆ ದೇವರು ಖಂಡಿತವಾಗಿಯೂ ಇದ್ದಾನೆ ಆದರೂ ಯಾರಾದರೂ ಇದನ್ನು ನಿರಾಕರಿಸಿದರೆ, ಅವನು ಮೂರ್ಖನಾಗಿದ್ದಾನೆ

**ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು**

ದೇವರಿಲ್ಲ ಎಂದು ಯಾರಾದರೂ ಅನುಮಾನಿಸಿದರೆ, ಅದು ತುಂಬಾ ಅಸಂಬದ್ಧವಾದ ವಿಷಯವಾಗಿದೆ ಮತ್ತು ದೇವರನ್ನು ನಿರಾಕರಿಸುವುದಕ್ಕಿಂತ ದೊಡ್ಡ ಅಜ್ಞಾನ ಮತ್ತು ಮೂರ್ಖತನವಿಲ್ಲ. ಜಗತ್ತಿನಲ್ಲಿ, ನ್ಯಾಯಾಲಯವು ಇಬ್ಬರು ಸಾಕ್ಷಿಗಳ ಸಾಕ್ಷ್ಯದ ಮೇಲೆ ಪದವಿಯನ್ನು ನೀಡುತ್ತದೆ. ಕೆಲವು ಸಾಕ್ಷಿಗಳ ಸಾಕ್ಷ್ಯದ ಮೇಲೆ, ನ್ಯಾಯಾಲಯವು ಜೀವದಂತಹ ಅಮೂಲ್ಯ ವಸ್ತುವಿನ ವಿರುದ್ಧ ಫತ್ವಾ ಹೊರಡಿಸುತ್ತದೆ ಮತ್ತು ಅವನನ್ನು ನೇಣುಗಂಬದಲ್ಲಿ ನೇತುಹಾಕುತ್ತದೆ, ಸಾಕ್ಷ್ಯದಲ್ಲಿ ನಕಲಿ ಮತ್ತು ಪಿತೂರಿಯ ಸಂದೇಹವಲ್ಲ ಬದಲಿಗೆ ವಿಶ್ವಾಸವಿರುತ್ತದೆ. ಆದರೆ ತಮ್ಮ ಸಮುದಾಯ್ರ ಮತ್ತು ದೇಶದಲ್ಲಿ ನೀತಿವಂತ ಸಜ್ಜನರಾಗಿರುವ ಸಾವಿರಾರು ಮತ್ತು ಲಕ್ಷಾಂತರ ಜನರು ದೇವರ ಬಗ್ಗೆ ಸಾಕ್ಷ್ಯ ನೀಡಿದ್ದಾರೆ, ಅದನ್ನು ಸಾಕಷ್ಟು ಎಂದು ಪರಿಗಣಿಸಬಾರದೇ. ಕೋಟ್ಯಂತರ ಸಂತರ ಸಾಕ್ಷಿ ಇದೆ ಎನ್ನುವುದಕ್ಕಿಂತಲೂ ಮೂರ್ಖತನ ಮತ್ತು ಹಠಮಾರಿತನ ಮತ್ತೇನು ಇರಲು ಸಾಧ್ಯ, ನಂತರ ಅವರು ತಮ್ಮ ಪ್ರಾಯೋಗಿಕ ಸ್ಥಿತಿಯಿಂದಲೇ ದೇವರು ಇದ್ದಾನೆ ಮತ್ತು ಖಂಡಿತವಾಗಿಯೂ ಇದ್ದಾನೆ ಎಂದು ತಮ್ಮ ಹೃದಯದ ರಕ್ತದಿಂದ ಈ ಸಾಕ್ಷ್ಯವನ್ನು ಬರೆದಿದ್ದಾರೆ. ಆದರೂ ಯಾರಾದರು ಅದನ್ನು ನಿರಾಕರಿಸಿದರೆ ಅವನು ಮೂರ್ಖನಾಗಿದ್ದಾನೆ, ಮತ್ತು ಒಂದು ವಿಷಯದ ಬಗ್ಗೆ ಅಭಿಪ್ರಾಯವನ್ನು ನೀಡಲು, ಅದರ ಬಗ್ಗೆ ಜ್ಞಾನವನ್ನು ಹೊಂದಿರುವುದು ಅವಶ್ಯಕವಾಗಿದೆ ಎಂಬುದು ವಿಚಿತ್ರವಾದ ವಿಷಯವಾಗಿದೆ. ಜ್ಞಾನವಿಲ್ಲದ ವ್ಯಕ್ತಿಗೆ ಅಭಿಪ್ರಾಯ ನೀಡುವ ಹಕ್ಕು ಇಲ್ಲ. ಅಭಿಪ್ರಾಯ ಹೇಳಿದರೆ ಅವನು ದಡ್ಡ ಮತ್ತು ಮೂರ್ಖ ಎನ್ನಿಸಿಕೊಳ್ಳುವುದಿಲ್ಲವೇ? ಖಂಡಿತವಾಗಿ ಎನ್ನಿಸಿಕೊಳ್ಳುತ್ತಾನೆ ಅದಲ್ಲದೆ ಇತರ ಬುದ್ಧಿವಂತರು ಅವನನ್ನು ಎಲೈ ಮೂರ್ಖನೇ ನಿನಗೆ ಏನೂ ತಿಳಿದಿಲ್ಲದಿರುವಾಗ ನಿನಗೆ ಅಭಿಪ್ರಾಯ ನೀಡುವ ಹಕ್ಕಿಲ್ಲ ಎಂದು ಹೇಳಿ ನಾಚಿಕೆಪಡಿಸುತ್ತಾರೆ. ಹೀಗಿರುವಾಗ ದೇವರಿಲ್ಲ ಎಂದು ಹೇಳುವವರಿಗೆ ಧರ್ಮಶಾಸ್ತ್ರದ ಜ್ಞಾನವೇ ಇಲ್ಲದಿರುವಾಗ ಅವರು ಯಾವತ್ತೂ ಪ್ರಯತ್ನವೂ ಪಡದೇ ಇರುವಾಗ ಅಭಿಪ್ರಾಯ ಹೇಳಲು ಅವರಿಗೇನು ಹಕ್ಕಿದೆ.

ಹೌದು, ದೇವರರಾಧಕನ ಹೇಳಿಕೆಯ ಪ್ರಕಾರ ದೇವರನ್ನು ಹುಡುಕಲು ಮತ್ತು ದೇವರನ್ನು ಹುಡುಕಲು ಅವರು ಸರಿಯಾದ ಕ್ರಮಗಳನ್ನು ತೆಗೆದುಕೊಂಡಿದ್ದರೆ ಅವರಿಗೆ ಇದನ್ನು ಹೇಳುವ ಹಕ್ಕು ಇರುತ್ತಿತ್ತು. ಅವರಿಗೆ ದೇವರು ಕಾಣದಿದ್ದರೆ ದೇವರಿಲ್ಲ ಎಂದು ಖಂಡಿತವಾಗಿಯು ಹೇಳುತ್ತಿದ್ದರು, ಆದರೆ ಅವರು ಯಾವುದೇ ಪ್ರಯತ್ನ ಮತ್ತು ಹೋರಾಟ ಮಾಡಿಲ್ಲವಾದ್ದರಿಂದ ಅದನ್ನು ನಿರಾಕರಿಸುವ

***(ಪುಟ ಸಂಖೆ 07 ರಲ್ಲಿ ಮುಂದುವರಿಸಲಾಗಿದೆ)***

## *129 ನೇ ಜಲ್ಸಾ ಸಾಲಾನ ಖಾದಿಯಾನ್ 27, 28, 29 ಡಿಸೆಂಬರ್ 2024ರಂದು ಆಯೋಜಿಸಲಾಗುವುದು*

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 129ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 27, 28 ಮತ್ತು 29ನೇ ಡಿಸೆಂಬರ್ 2024 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್.**

**(ನಾಝಿರ್ ಇಸ್ಲಾಹ್-ವ-ಇರ್‌ಶಾದ್ ಖಾದಿಯಾನ್)**

# ಖುತ್‌ಬ ಜುಮುಅ

ಜಿಬ್ರೀಲ್ ಅಲೈಹಿಸ್ಸಲಾಮ್ ಹೇಳಿದರು: ಯಾ ರಸೂಲಲ್ಲಾಹ್, ನೀವು ಆಯುಧಗಳನ್ನು ಕೆಳಗಿರಿಸಿದ್ದೀರ. ಅಲ್ಲಾಹನಾಣೆ, ನಾನು ಆಯುಧವನ್ನು ಕೆಳಗೆ ಇಳಿಸಿಲ್ಲ. ಮತ್ತು ಒಂದು ಹದೀಸ್‌ನಲ್ಲಿ ಹಝ್ರತ್ ಪೈಗಂಬರ್(ಸ)ರು ಶತ್ರುಗಳನ್ನು ಎದುರಿಸಿದಾಗಿನಿಂದ ದೇವದೂತರು ತಮ್ಮ ಆಯುಧಗಳನ್ನು ಕೆಳಗಿಳಿಸಲಿಲ್ಲ ಮತ್ತು ನಾವು ಇಲ್ಲಿಯ ತನಕ ಅಹ್‌ಝಾಬಿನ ಜನರನ್ನು ಹಿಂಬಾಲಿಸಿ ಮರಳಿ ಬರುತ್ತಿದ್ದೇವೆ. ನಾವು ಕೊನೆಗೆ ಹಮ್‌ರಾಉಲ್ ಅಸದಿಗೆ ತಲುಪಿದೆವು.

ಖಂದಕ್ ಯುದ್ಧ ಅಥವಾ ಅಹ್‌ಝಾಬ್ ಯುದ್ಧವು ಅತ್ಯಂತ ಅಪಾಯಕಾರಿ ಯುದ್ಧವಾಗಿತ್ತು. ಇದಕ್ಕಿಂತ ದೊಡ್ಡ ತುರ್ತು ಪರಿಸ್ಥಿತಿ ಅಲ್ಲಿಯ ತನಕ ಮುಸ್ಲಿಮರಿಗೆ ಉಂಟಾಗಿರಲಿಲ್ಲ. ಅನಂತರ ಕೂಡ ಹಝ್ರತ್ ಪೈಗಂಬರ್(ಸ)ರ ಜೀವಿತದಲ್ಲಿ ಅಂತಹ ವಿಪತ್ತು ಉಂಟಾಗಿರಲಿಲ್ಲ.

ಬನೂ ಖುರೈಝದ ಗೋತ್ರವನ್ನು ಮುಸ್ಲಿಮರು ಮುತ್ತಿಗೆ ಹಾಕಿದ ಬಗ್ಗೆ ಇನ್ನಷ್ಟು ವಿವರಣೆ ಹೀಗಿದೆ: ಮುತ್ತಿಗೆ ಸುದೀರ್ಘಗೊಂಡಾಗ ಮತ್ತು ರಾಜಿಯಾಗಲು ಯಹೂದಿಯರಿಗೆ ಯಾವುದೇ ಮಾರ್ಗ ಲಭಿಸದೇ ಹೋದಾಗ ಅವರ ಮುಖಂಡ ಕಅ್‌ಬ್ ಬಿನ್ ಅಸದ್ ಅವರ ಮುಂದೆ ಮೂರು ಸಲಹೆಗಳನ್ನು ಮುಂದಿಟ್ಟರು. ಒಂದು, ನಾವು ಮುಹಮ್ಮದ್(ಸ)ರಲ್ಲಿ ವಿಶ್ವಾಸ ಕೈಗೊಂಡು ಮುಸ್ಲಿಮರಾಗೋಣ. ಏಕೆಂದರೆ ಅವರ ಸತ್ಯತೆ ಸ್ಪಷ್ಟಗೊಂಡಿದೆ. ಈ ರೀತಿಯಾಗಿ ಯುದ್ಧ ನಿಲ್ಲುವುದು..... ಎರಡು, ನಾವು ಮಕ್ಕಳನ್ನು ಮತ್ತು ಮಹಿಳೆಯರನ್ನು ಕೊಲ್ಲುವುದಾದರೆ, ಫಲಿತಾಂಶದ ಬಗ್ಗೆ ಚಿಂತೆಯಿಲ್ಲದೇ ಖಡ್ಗವೆತ್ತಿ ಯುದ್ಧ ಮೈದಾನಕ್ಕೆ ಧುಮುಕಬಹುದಾಗಿದೆ. ಅನಂತರ ಏನೇ ಆದರೂ ಪರವಾಗಿಲ್ಲ....... ಮೂರು, ಇಂದು ಸಬ್ಬತ್ ರಾತ್ರಿಯಾಗಿದೆ. ಇಂದು ನಾವು ಯಾವುದೇ ಹಲ್ಲೆ ನಡೆಸಲಾರೆವು ಎಂದು ಮುಹಮ್ಮದ್(ಸ) ಮತ್ತು ಅವರ ಸಹಾಬಿಯರು ಭಾವಿಸುತ್ತಿರಬಹುದು.

**ಖಂದಕ್ ಯುದ್ಧದ ವಿವರಣೆ ಮತ್ತು ಬನೂ ಖುರೈಝಾರ ಪರಿಸ್ಥಿತಿಗಳ ವಿವರಣೆಯಲ್ಲಿ ಹಝ್ರತ್ ಪೈಗಂಬರ್(ಸ)ರ ಪವಿತ್ರ ಜೀವನ ಚರಿತ್ರೆಯ ವಿಶ್ವಾಸವರ್ಧಕ ಘಟನೆಗಳ ಪ್ರಸ್ತಾವನೆ,**
**ಮತ್ತು ಪಾಕಿಸ್ತಾನ, ಬಂಗ್ಲಾದೇಶ, ಅಲ್‌ಜಝಾಇರ್ ಮತ್ತು ಸೂಡಾನ್‌ನ ಅಹ್ಮದಿಯರಿಗಾಗಿ ದುಆ ಮಾಡುವಂತೆ ಮನವಿ**

ಇಸ್ರೇಲಿ ಸರ್ಕಾರ, ಅಮೇರಿಕದ ಸರ್ಕಾರ ಮತ್ತು ದೊಡ್ಡ ಪ್ರಬಲ ರಾಷ್ಟ್ರಗಳ ಕೈಗಳನ್ನು ಅಲ್ಲಾಹನಿಗೆ ತಡೆಯಬಹುದಾಗಿದೆ. ಅವನ ಕೈಯಲ್ಲಿ ಎಲ್ಲ ಶಕ್ತಿಯಿದೆ. ಆದರೆ ಅದಕ್ಕಾಗಿ ಮುಸ್ಲಿಮರು ಕೂಡ ತಮ್ಮ ಕೃತ್ಯಗಳನ್ನು ಅಲ್ಲಾಹನ ಸಂಪ್ರೀತಿಗೆ ಅನುಸಾರವಾಗಿ ಮಾಡಬೇಕಾಗಿದೆ. ಪರಸ್ಪರ ಸಹೋದರರಂತೆ ಮಾದರಿ ತೋರಿಸಬೇಕು. ಪರಸ್ಪರ ಭಿನ್ನತೆಗಳನ್ನು ಕೊನೆಗೊಳಿಸಬೇಕಾಗುವುದು. ಆದರೆ ಅದು ನಮಗೆ ಎಲ್ಲೂ ಕಾಣಲು ಸಿಗುತ್ತಿಲ್ಲ. ಅದು ಆಗುವುದಾದರೆ ಮಾತ್ರವೇ ಅಲ್ಲಾಹನ ಸಹಾಯದ ವಾಗ್ದಾನ ಈಡೇರುವುದು. ಅದಿಲ್ಲದೇ ಸಾಧ್ಯವಲ್ಲ. ಮುಸ್ಲಿಮರು ಸತ್ಯವಿಶ್ವಾಸಿಗಳಾಗಿ ಇರಬೇಕಾಗುವುದು. ಅಲ್ಲಾಹನು ನಮಗೂ ಎಲ್ಲ ಮುಸ್ಲಿಮರಿಗೂ ಅದರ ಸೌಭಾಗ್ಯ ನೀಡಲಿ.

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **'ಮಸ್ಜಿದ್ ಮುಬಾರಕ್'** ನಿಂದ **11-10-2024** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّآ إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ ۔ بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಇತ್ತೀಚಿಗೆ ಅಹ್‌ಝಾಬ್ ಯುದ್ಧಕ್ಕೆ ಸಂಬಂಧಪಟ್ಟ ಪ್ರಸ್ತಾಪ ನಡೆಯುತ್ತಿದೆ. ರಾತ್ರಿಯ ಬಿರುಗಾಳಿ ಮತ್ತು ತೂಫಾನಿನ ಕಾರಣದಿಂದ ಸತ್ಯನಿಷೇಧಿಗಳು ಯುದ್ಧ ಮೈದಾನವನ್ನು ಖಾಲಿ ಮಾಡಿದರು ಎಂದು ಪ್ರಸ್ತಾಪಿಸಲಾಗಿತ್ತು. ಅಲ್ಲಾಹನು ಹಝ್ರತ್ ಪೈಗಂಬರ್(ಸ)ರ ಮೂಲಕ ಸತ್ಯನಿಷೇಧಿಗಳ ಸೇನೆಯನ್ನು ಹಿಮ್ಮೆಟ್ಟಿ ಹೋಗುವಂತೆ ಮಾಡಿದಾಗ ಹಝ್ರತ್ ಪೈಗಂಬರ್(ಸ) ಹೇಳಿದರು: **ಅಲ್‌ಆನ ನಗ್‌ಝೂಹುಮ್ ವಲಾ ಯಗ್‌ಝೂನನಾ.** ಎಂದರೆ ಇನ್ನು ಮುಂದೆ ನಾವು ಖುರೈಶಿಯರ ವಿರುದ್ಧ ಹೋರಾಡಲಿಕ್ಕಾಗಿ ಹೊರಡುವೆವು. ಆದರೆ ಅವರಿಗೆ ನಮ್ಮ ಎದುರಾಗಿ ಹೋರಾಡಲು ಧೈರ್ಯ ಬರದು. ಅನಂತರ ಹಾಗೆಯೇ ಆಯಿತು. ಹಝ್ರತ್ ಪೈಗಂಬರ್(ಸ)ರು ಮಕ್ಕ ವಿಜಯಶಾಲಿಯಾದವರೆಗೂ ಖುರೈಷಿಗಳಿಗೆ ಮುಸಲ್ಮಾನರ ಮೇಲೆ ದಾಳಿ ಮಾಡುವ ಧೈರ್ಯ ಮಾಡಲಿಲ್ಲ, ಆದಾಗ್ಯೂ, ಮುಂಜಾನೆ ಕಂದಕಕ್ಕೆ ಅಡ್ಡಲಾಗಿ ಯಾರೂ ಇರಲಿಲ್ಲ, ಅವರೆಲ್ಲರೂ ಓಡಿಹೋಗಿದ್ದರು. ತದನಂತರ ಹಝ್ರತ್ ಪೈಗಂಬರ್(ಸ)ರು ಮುಸ್ಲಿಮರೆಲ್ಲರನ್ನು ತಮ್ಮ ತಮ್ಮ ಮನೆಗಳಿಗೆ ತೆರಳುವಂತೆ ಅನುಮತಿ ನೀಡಿದರು. ಹೀಗೆ ಎಲ್ಲರು ಖುಷಿಯಿಂದ ಅವರವರ ಮನೆಗಳಿಗೆ ಹೋಗತೊಡಗಿದರು. (ಸುಬುಲುಲ್ ಹುದಾ ವರ‍್ರಶಾದ್, ಸಂಪುಟ-4, ಪುಟಗಳು 389-390, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್ 1993)

ಕಂದಕವನ್ನು ಹದಿನೈದು ದಿನಗಳ ತನಕ, ಮತ್ತೊಂದು ಹೇಳಿಕೆ ಪ್ರಕಾರ ಇಪ್ಪತ್ತು ಅಥವಾ ಒಂದು ತಿಂಗಳಷ್ಟು ಕಾಲ ಮುತ್ತಿಗೆ ಹಾಕಲಾಗಿತ್ತು ಎಂದು ಹೇಳಲಾಗುತ್ತದೆ. (ಅವ್ತಾಉಲ್ ಅಸ್ಮಾ, ಸಂಪುಟ-1, ಪುಟ-242, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಖಂದಕ್ ಯುದ್ಧದಲ್ಲಿ ಒಂಬತ್ತು ವ್ಯಕ್ತಿಗಳು ಹುತಾತ್ಮರಾದರು. ಒಬ್ಬರು ಸಅದ್ ಬಿನ್ ಮುಆದ್(ರ). ಅವರು ಈ ಯುದ್ಧದಲ್ಲಿ ಗಾಯಗೊಂಡರು ಮತ್ತು ಕೆಲವು ದಿನಗಳ ನಂತರ ನಿಧನರಾದರು. ಅನಸ್ ಬಿನ್ ಔಸ್(ರ), ನಂತರ ಅಬ್ದುಲ್ಲಾ ಬಿನ್ ಸಹಲ್(ರ), ತುಫೈಲ್ ಬಿನ್ ನುಮಾನ್(ರ), ಸಾಲ್ಬಾ ಬಿನ್ ಅನಾಮಾ ಬಿನ್ ಆದಿ(ರ), ಕಅ್‌ಬ್ ಬಿನ್ ಝೈದ್(ರ), ಖೈಸ್ ಬಿನ್ ಝೈದ್ ಬಿನ್ ಆಮಿರ್(ರ), ಅಬ್ದುಲ್ಲಾ ಬಿನ್ ಅಬಿ ಖಾಲಿದ್(ರ), ಅಬು ಸಿನಾನ್ ಬಿನ್ ಸಫಿ ಬಿನ್ ಸಖ್ರ್(ರ). ಮತ್ತು ಅಬೂಸುಫ್‌ಯಾನಿನ ಸೇನೆಯ ಮಾಹಿತಿ ಪಡೆಯಲು ಹೋಗಿದ್ದ ಇಬ್ಬರು ಸಹಾಬಿಯರು ಮೊದಲೇ ಶಹೀದ್ ಆಗಿದ್ದರು. ಹೀಗೆ ಒಟ್ಟು 11 ಸಹಾಬಿಯರು ಶಹೀದ್ ಆಗಿದ್ದರು. ಇವರಿಬ್ಬರು ಸುಲೈತ್(ರ) ಮತ್ತು ಸುಫ್ಯಾನ್ ಬಿನ್ ಔಫ್ ಅಸ್ಲಮಿ(ರ) ಆಗಿದ್ದರು.

ಅಮ್ರ್ ಬಿನ್ ಅಬ್ದೆವದ್, ನೌಫಲ್ ಬಿನ್ ಅಬ್ದುಲ್ಲಾ ಬಿನ್ ಮುಗೈರಾ ಮತ್ತು ಉಸ್ಮಾನ್ ಬಿನ್ ಮುನಾಬಿ ಎಂಬ ಮುಶ್ರಿಕರ ಮೂರು ವ್ಯಕ್ತಿಗಳು ಕೊಲ್ಲಲ್ಪಟ್ಟಿದ್ದರು. ಖಂದಕ್ ದಿನ ಅಂದರೆ ನಾಸ್ತಿಕರು ಪ್ರಬಲವಾಗಿ ದಾಳಿ ಮಾಡಿದ ದಿನ ಮುಸಲ್ಮಾನರೂ ಬಾಣಗಳಿಗೆ ತಕ್ಕ ಉತ್ತರ ನೀಡಿ ಅಲ್ಲಿಂದ ಮಕ್ಕಾಗೆ ಹೋಗಿ ತಮ್ಮ ಪ್ರಾಣ ಬಿಟ್ಟರು. (ಸುಬುಲುಲ್ ಹುದಾ ವಲ್-ರಶಾದ್, ಸಂಪುಟ-4, ಪುಟಗಳು-364, 365, 390, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್, 1993)

ಅಹ್‌ಝಾಬ್ ಯುದ್ಧದ ಅದ್ಭುತವಾದ ಅಂತ್ಯದ ಬಗ್ಗೆ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಹೀಗೆ ಹೇಳುತ್ತಾರೆ: ಸುಮಾರು ಇಪ್ಪತ್ತು ದಿನಗಳ ಮುತ್ತಿಗೆಯ ನಂತರ ಸತ್ಯನಿಷೇಧಿಗಳ ಸೇನೆ ವಿಫಲಗೊಂಡು

ಮದೀನದಿಂದ ಮರಳಿ ಹೋಯಿತು. ಅದರ ಸಹಾಯಕ್ಕಾಗಿ ಹೊರಟಿದ್ದ ಬನೂ ಖುರೈಝ಼ ಗೋತ್ರದವರು ಸಹ ತಮ್ಮ ಕೋಟೆಗಳಿಗೆ ಮರಳಿ ಹೋದರು. ಈ ಯುದ್ಧದಲ್ಲಿ ಮುಸ್ಲಿಮರ ಪ್ರಾಣಹಾನಿ ಹೆಚ್ಚಿರಲಿಲ್ಲ. ಅರ್ಥಾತ್ ಐದಾರು ಮಂದಿ ಮಾತ್ರ ಹುತಾತ್ಮರಾದರು ಆದರೆ ಔಸ್ ಗೋತ್ರದ ಮುಖ್ಯಸ್ಥ ಸಅದ್ ಬಿನ್ ಮುಆದ್(ರ) ಅವರು ತೀವ್ರ ಗಾಯಗೊಂಡರು ಅಂತಿಮವಾಗಿ ಅವರು ಇದರಿಂದ ನಿಧನರಾದರು ಮತ್ತು ಈ ನಷ್ಟವು ಮುಸ್ಲಿಮರಿಗೆ ತುಂಬಲಾರದ ನಷ್ಟವಾಗಿತ್ತು. ಸತ್ಯನಿಷೇಧಿಗಳ ಸೈನ್ಯದಿಂದ ಕೇವಲ ಮೂರು ಜನರು ಮಾತ್ರ ಕೊಲ್ಲಲ್ಪಟ್ಟರು, ಆದರೆ ಈ ಯುದ್ಧದಲ್ಲಿ ಖುರೈಶಿಯರಿಗೆ ಎಂತಹ ಹಾನಿ ಉಂಟಾಯಿತು ಎಂದರೆ, ಅನಂತರ ಅವರಿಗೆ ಮುಸ್ಲಿಮರ ವಿರುದ್ಧ ಹೀಗೆ ಒಟ್ಟಾಗಿ ಸಂಘ ಸೇರಿಕೊಂಡು ಹೊರಡಲು ಅಥವಾ ದಾಳಿ ನಡೆಸಲು ಧೈರ್ಯ ಉಂಟಾಗಲಿಲ್ಲ. ಹೀಗೆ ಹಝ್ರತ್ ಪೈಗಂಬರ್(ಸ)ರ ಭವಿಷ್ಯವಾಣಿ ಅಕ್ಷರಶಃ ಈಡೇರಿತು. ಸತ್ಯನಿಷೇಧಿಗಳ ಸೇನೆ ಹೊರಟು ಹೋದ ನಂತರ ಹಝ್ರತ್ ಪೈಗಂಬರ್(ಸ) ಸಹಾಬಿಯರೊಡನೆ ಮರಳಿ ಹೋಗಲು ಅಪ್ಪಣೆ ಕೊಟ್ಟರು. ಹೀಗೆ ಮುಸ್ಲಿಮರು ಯುದ್ಧ ಮೈದಾನದಿಂದ ಹೊರಟು ಮದೀನವನ್ನು ಪ್ರವೇಶಿಸಿದರು......... ಅಪ್ರತೀಕ್ಷವಾಗಿ ಮತ್ತು ಊಹಿಸಲು ಸಾಧ್ಯವಿಲ್ಲದ ರೀತಿಯಲ್ಲಿ ಕೊನೆಗೊಂಡ ಖಂದಕ್ ಯುದ್ಧ ಅಥವಾ ಅಹ್‌ಝಾಬ್ ಯುದ್ಧವು ಅತ್ಯಂತ ಅಪಾಯಕಾರಿ ಯುದ್ಧವಾಗಿತ್ತು. ಇದಕ್ಕಿಂತ ದೊಡ್ಡ ತುರ್ತು ಪರಿಸ್ಥಿತಿ ಅಲ್ಲಿಯ ತನಕ ಮುಸ್ಲಿಮರಿಗೆ ಉಂಟಾಗಿರಲಿಲ್ಲ. ಅನಂತರ ಕೂಡ ಹಝ್ರತ್ ಪೈಗಂಬರ್(ಸ)ರ ಜೀವಿತದಲ್ಲಿ ಅಂತಹ ವಿಪತ್ತು ಉಂಟಾಗಿರಲಿಲ್ಲ. ಇದು ಇಸ್ಲಾಮಿನ ಕಟ್ಟಡವನ್ನು ಬೇರು ಸಹಿತ ಅಲುಗಾಡಿಸಿದ ಅಪಾಯಕಾರಿ ಭೂಕಂಪವಾಗಿತ್ತು, ಇದನ್ನು ನೋಡಿದ ಮುಸಲ್ಮಾನರ ಕಣ್ಣುಗಳಲ್ಲಿ ಕಲ್ಲು ಬಿದ್ದು ಅವರ ಯಕೃತ್ತು ಬಾಯಿಗೆ ಬರಲಾರಂಭಿಸಿತು ಮತ್ತು ಎಲ್ಲವೂ ಮುಗಿಯಿತು ಎಂದು ದುರ್ಬಲ ಜನರು ಭಾವಿಸಿದ್ದರು. ಮತ್ತು ಈ ಅಪಾಯಕಾರಿ ಭೂಕಂಪದ ಆಘಾತಗಳು ಹೆಚ್ಚು ಕಡಿಮೆ ಒಂದು ತಿಂಗಳು ಕಾಲ ಅವರನ್ನು ಆವರಿಸಿದ್ದವು. ಮತ್ತು ಹಲವಾರು ಸಾವಿರ ರಕ್ತಪಿಪಾಸು ಮೃಗಗಳು ಅವರ ಮನೆಗಳನ್ನು ಮುತ್ತಿಗೆ ಹಾಕಿದವು ಮತ್ತು ಈ ವಿಪತ್ತಿನ ಕಹಿಯನ್ನು ಬನೂ ಖುರೈಝ಼ ಗೋತ್ರದ ವಂಚನೆ ಇಮ್ಮಡಿಗೊಳಿಸಿತು. ಯಾವ ಗೋತ್ರಕ್ಕೆ ಮದೀನದಿಂದ ಸುರಕ್ಷಿತವಾಗಿ ಮತ್ತು ಸಮಾಧಾನದಿಂದ ಹೊರಡಲು ಹಝ್ರತ್ ಪೈಗಂಬರ್(ಸ) ಅನುಮತಿ ಕೊಟ್ಟಿದ್ದರೋ ಅದೇ ಬನೂ ನಝೀರ್ ಗೋತ್ರದ ಯಹೂದಿಯರು ಈ ಎಲ್ಲ ಪಿತೂರಿಯ ಹಿಂದೆ ಇದ್ದರು. ಈ ಯಹೂದಿ ಮುಖಂಡರ ಪ್ರಚೋದನೆಯ ಕಾರಣದಿಂದ ಅರಬ್ ಮರುಭೂಮಿಯ ಎಲ್ಲ ಪ್ರಸಿದ್ಧ ಗೋತ್ರಗಳು ಇಸ್ಲಾಮಿನೊಂದಿಗೆ ಇರುವ ಹಗೆಯ ಮತ್ತಿನಲ್ಲಿ ಉನ್ಮತ್ತರಾಗಿ ಮುಸ್ಲಿಮರನ್ನು ನಾಮಾವೇಷ ಮಾಡಲಿಕ್ಕಾಗಿ ಮದೀನದಲ್ಲಿ ಒಟ್ಟುಗೂಡಿದ್ದರು. ಆ ವೇಳೆ ಆ ದುಷ್ಟರಿಗೆ ಪಟ್ಟಣದಲ್ಲಿ ಪ್ರವೇಶಿಸಲು ಅವಕಾಶ ಲಭಿಸಿರುತ್ತಿದ್ದರೆ ಒಬ್ಬ ಮುಸ್ಲಿಮನು ಕೂಡ ಜೀವಂತವಾಗಿ ಉಳಿಯುತ್ತಿರಲಿಲ್ಲ. ಯಾವಳೇ ಪರಿಶುದ್ಧ ಮಹಿಳೆಯ ಮಾನ ಆ ಜನರ ಕೊಳಕು ಹಲ್ಲೆಯಿಂದ ಸುರಕ್ಷಿತವಿರುತ್ತಿರಲಿಲ್ಲ. ಆದರೆ ಅಲ್ಲಾಹನ ಕೃಪೆಯಿಂದ ಮಾತ್ರ ಮತ್ತು ಅವರ ಶಕ್ತಿಯ ಅದೃಶ್ಯ ಕೈಯಿಂದ ಆ ದೊಡ್ಡ ಸೇನೆಗೆ ಪರಾಜಿತಗೊಂಡು ಮರಳಿ ಹೋಗಬೇಕಾಗಿ ಬಂತು ಹಾಗೂ ಮುಸ್ಲಿಮರು ಧನ್ಯರಾಗಿ ಕೃತಜ್ಞತೆಯಿಂದ ಶಾಂತಿ ಮತ್ತು ನೆಮ್ಮದಿಯ ನಿಟ್ಟುಸಿರು ಬಿಡುತ್ತಾ ತಮ್ಮ ಮನೆಗಳಿಗೆ ಮರಳಿ ಹೋದರು. ಆದರೆ ಬನೂ ಖುರೈಝ಼ ಗೋತ್ರದ ಅಪಾಯ ಬಾಕಿಯಿತ್ತು. ಅವರ ಪಿತೂರಿಯನ್ನು ತಡೆಯುವುದು ಅಗತ್ಯವಾಗಿತ್ತು. ಏಕೆಂದರೆ ಮದೀನದಲ್ಲಿ ಅವರು ಇರುವುದು ಮುಸ್ಲಿಮರಿಗೆ ಅಂಗಿತೋಳಿನಲ್ಲಿ ಅಡಗಿರುವ ಸರ್ಪಕ್ಕಿಂತ ಕಡಿಮೆ ಏನೂ ಆಗಿರಲಿಲ್ಲ.

(ಸೀರತ್ ಖಾತಮನ್ನಬಿಯೀನ್(ಸ), ಹಝ್ರತ್ ಸಾಹಿಬ್‌ಝಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ–595–596)

ಅದನ್ನು ತಡೆಯಲಿಕ್ಕಾಗಿ ಬನೂ ಖುರೈಝ಼ ಗೋತ್ರದ ವಿರುದ್ಧವೂ ಕಾರ್ಯಾಚರಣೆ ನಡೆಯಿತು. ಅದನ್ನು ಬನೂ ಖುರೈಝ಼ ಯುದ್ಧವೆಂದು ಕರೆಯಲಾಗುತ್ತದೆ. ಅದು ಹಿಜರೀ 5, ಝ಼ುಲ್‌ಖಅದ ತಿಂಗಳಲ್ಲಿ, ಎಂದರೆ ಕ್ರಿಸ್ತ ಶಕ 627, ಮಾರ್ಚ್ ಮತ್ತು ಎಪ್ರಿಲ್ ತಿಂಗಳಲ್ಲಿ ನಡೆಯಿತು.

(ಸೀರತ್ ಖಾತಮನ್ನಬಿಯೀನ್(ಸ), ಹಝ್ರತ್ ಸಾಹಿಬ್‌ಝಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ–597)

(ಹುಝೂರ್ ಅನ್ವರ್(ಅತಬಅ) ಅವರು ತಾವೂಝನ್ನು ಪಠಿಸಿದರು ಮತ್ತು ಹೇಳಿದರು) ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ:

**ವ ಅನ್‌ಝಲಲ್ಲಝೀನ ಝಾಹರೂಹುಮ್ಮಿನ್ ಅಹ್ಲಿಲ್‌ಕಿತಾಬಿ ಮಿನ್ ಸಯಾಸೀಹಿಮ್ ವ ಖಝಫ ಫೀ ಖುಲೂಬಿಹಿಮುರ್ರುಅ್‌ಬ ಫರೀಖನ್ ತಖ್ತುಲೂನ ವ ತಅ್‌ಸಿರೂನ ಫರೀಖಾ– ವಔರಸಕುಮ್ ಅರ್ಝಹುಮ್ ವದಿಯಾರಹುಮ್ ವ ಅಮ್ವಾಲಹುಮ್ ವ ಅರ್ಝಂಲ್ಲಮ್ ತತಊಹಾ, ವಕಾನಲ್ಲಾಹು ಅಲಾ ಕುಲ್ಲಿ ಶೈಯಿನ್ ಖದೀರಾ–** (ಅಲ್‌ಅಹ್‌ಝಾಬ್: 27–28)

ಅಂದರೆ: ಗ್ರಂಥದವರ ಪೈಕಿ ಅವರಿಗೆ (ಶತ್ರು ಸೈನ್ಯಕ್ಕೆ) ಸಹಾಯ ನೀಡಿದವರನ್ನು ಅವರ ಕೋಟೆಗಳಿಂದ ಅವನು ಇಳಿಸಿಬಿಟ್ಟು ಅವರ ಹೃದಯಗಳಲ್ಲಿ ಭಯವನ್ನು ಹುಟ್ಟಿಸಿದನು. (ಅವರಲ್ಲಿ) ಕೆಲವರನ್ನು ನೀವು ಹತ್ಯೆ ಮಾಡಿದಿರಿ; ಕೆಲವರನ್ನು ಸೆರೆಹಿಡಿದಿರಿ. ಅವರ ಭೂಪ್ರದೇಶ, ಮನೆಗಳು, ಸಂಪತ್ತುಗಳಿಗೂ ಮತ್ತು (ಇಷ್ಟರ ತನಕ) ನೀವು ಕಾಲೂರದ ಭೂಪ್ರದೇಶಕ್ಕೂ ಅವನು ನಿಮ್ಮನ್ನು ಉತ್ತರಾಧಿಕಾರಿಗಳನ್ನಾಗಿ ಮಾಡಿದನು. ಅಲ್ಲಾಹನಿಗೆ ಎಲ್ಲವುಗಳ ಮೇಲೆ ಸರ್ವಾಧಿಕಾರವಿದೆ.

ಬನು ಖುರೈಝಾ ಅವರ ಸಂಕ್ಷಿಪ್ತ ಪರಿಚಯವೆಂದರೆ ಬನು ಖುರೈಝಾ ಯಹೂದಿಗಳ ಗೋತ್ರವಾಗಿದೆ. ಈ ಖುರೈಝಾ ಅವರ ವಂಶಸ್ಥರು ಮದೀನದ ಬಳಿ ಕೆಲವು ಮೈಲುಗಳಷ್ಟು ದೂರ ಬಲವಾದ ಕೋಟೆಗಳಿಗೆ ಬಂದಿಳಿದಿದ್ದರು. ನಂತರ ಅವರ ಹೆಸರಿಗೆ ಸಂಬಂಧಿಸಲಾಗಿತ್ತು. ಖುರೈಝಾ ಮತ್ತು ನಝೀರ್ ಇಬ್ಬರು ಸಹೋದರರು ಹಝ್ರತ್ ಹರೂನ್ ಅವರ ವಂಶಸ್ಥರಾಗಿದ್ದರು. ಒಬ್ಬರ ಮಕ್ಕಳನ್ನು ಬನೂ ಖುರೈಝಾ ಎಂದೂ ಇನ್ನೊಬ್ಬರ ಮಕ್ಕಳನ್ನು ಬನೂ ನಝೀರ್ ಎಂದೂ ಕರೆಯಲ್ಪಟ್ಟರು.

(ತಾರೀಖ್ ಅಲ್–ಇಸ್ಲಾಂ ವಫೀಯಾತಿಲ್ ಮಶಾಹೀರ್ ವಲ್‌ಅಅ್‌ಲಾಮ್, ಪುಟ–320, ದಾರುಲ್ ಕುತುಬ್ ಅಲ್‌ಅರಬಿ, 1990)
(ಸಬ್ಲುಲ್ ಹುದಾ ವರ್ರಶಾದ್, ಸಂಪುಟ–5, ಪುಟ–18, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್, 1993)

ಈ ಯುದ್ಧದ ಹಿನ್ನೆಲೆ, ಹಿಂದಿನ ಖುತ್‌ಬಗಳಲ್ಲಿ ವಿವರಿಸಲಾಗಿದೆ ಮತ್ತು ಖಂದಕ್ ಯುದ್ಧದ ವಿವರಣೆಯಲ್ಲಿ ವಿವರಿಸಿದಂತೆ, ಯುದ್ಧದ ಸಂದರ್ಭದಲ್ಲಿ ಬನೂ ಖುರೈಝಾ ಅವರು ಒಪ್ಪಂದವನ್ನು ಮುರಿದು ಮುಸ್ಲಿಮರ ವಿರುದ್ಧ ಖುರೈಷಿಗಳಿಗೆ ಸಹಾಯ ಮಾಡಿದರು ಮತ್ತು ಈ ಅವರ ಮತ್ತು ಹಝ್ರತ್ ಪೈಗಂಬರ್(ಸ)ರ ನಡುವಿನ ಒಪ್ಪಂದಗಳನ್ನು ಉಲ್ಲಂಘಿಸಿದ್ದರು. ಖಂದಕ್ ಯುದ್ಧದಿಂದ ಮರಳಿ ಬಂದ ನಂತರ ಹಝ್ರತ್ ಪೈಗಂಬರ್(ಸ) ಮತ್ತು ಸಹಾಬಿಯರು ಆಯುಧಗಳನ್ನು ಕೆಳಗಿಟ್ಟರು. ಹಝ್ರತ್ ಪೈಗಂಬರ್(ಸ)ರು ಹಝ್ರತ್ ಆಯಿಶಾ(ರ) ಮನೆಗೆ ಪ್ರವೇಶಿಸಿದರು ಮತ್ತು ನೀರನ್ನು ತರೆಸಿ ತಮ್ಮ ತಲೆಯನ್ನು ತೊಳೆಯಲು ಪ್ರಾರಂಭಿಸಿದರು. ಒಂದು ವರದಿಯ ಪ್ರಕಾರ ಹಝ್ರತ್ ಪೈಗಂಬರ್(ಸ)ರು ಸ್ನಾನ ಮಾಡಿ ಸುಗಂಧ ದ್ರವ್ಯವನ್ನು ತರೆಸಿ ಝುಹರ್ ನಮಾಝನ್ನು ನಿರ್ವಹಿಸಿದರು. ಹಝ್ರತ್ ಆಯಿಶಾ(ರ) ಹೇಳುತ್ತಾರೆ: ನಾವು ಮನೆಯಲ್ಲಿದ್ದಾಗ ಒಬ್ಬ ವ್ಯಕ್ತಿ ನಮ್ಮನ್ನು ಸಲಾಮ್ ಮಾಡಿದರು. ಅವರು ಕರೆದಾಗ, ಹಝ್ರತ್ ಪೈಗಂಬರ್(ಸ)ರು ಅವರ ಕಡೆಗೆ ಹೋದರು ಮತ್ತು ನಾನು ಬಾಗಿಲಿನ ಮಧ್ಯದಿಂದ ನೋಡುತ್ತಿದ್ದೆ. ಹಝ್ರತ್ ದಿಹಿಯಾ ಕಲ್ಬಿ(ರ) ಇದ್ದುದನ್ನು ನಾನು ನೋಡಿದೆ, ಅವರು ತಮ್ಮ ಮುಖದ ಧೂಳನ್ನು ಒರೆಸುತ್ತಿದ್ದರು ಮತ್ತು ಅವರು ಪೇಟವನ್ನು ಧರಿಸಿದ್ದರು. ಹಝ್ರತ್ ಪೈಗಂಬರ್(ಸ)ರು ಸವಾರಿಯ ಕುತ್ತಿಗೆಗೆ ಒರಗಿ ನಿಂತಿದ್ದರು. ಅವರು ಹೇಳಿದರು, ಯಾ ರಸೂಲಲ್ಲಾಹ್, ನೀವು ಆಯುಧಗಳನ್ನು ಕೆಳಗಿರಿಸಿದ್ದೀರ. ಅಲ್ಲಾಹನಾಣೆ, ನಾನು ಆಯುಧವನ್ನು ಕೆಳಗೆ ಇಳಿಸಿಲ್ಲ. ಮತ್ತು ಒಂದು ಹದೀಸ್‌ನಲ್ಲಿ ಹಝ್ರತ್ ಪೈಗಂಬರ್(ಸ)ರು ಶತ್ರುಗಳನ್ನು ಎದುರಿಸಿದಾಗಿನಿಂದ ದೇವದೂತರು ತಮ್ಮ ಆಯುಧಗಳನ್ನು ಕೆಳಗಿಳಿಸಲಿಲ್ಲ ಮತ್ತು ನಾವು ಇಲ್ಲಿಯ ತನಕ ಅಹ್‌ಝಾಬಿನ ಜನರನ್ನು ಹಿಂಬಾಲಿಸಿ ಮರಳಿ ಬರುತ್ತಿದ್ದೇವೆ. ನಾವು ಕೊನೆಗೆ ಹಮ್‌ರಾಉಲ್ ಅಸದಿಗೆ ತಲುಪಿದೆವು. ಅಲ್ಲಾಹನು ಅವರನ್ನು ಸೋಲಿಸಿದನು. ಈಗ ನೀವು ಈ ಕಡೆ ತಿರುಗಿ. ಅದಕ್ಕೆ ಹಝ್ರತ್ ಪೈಗಂಬರ್(ಸ) ಹೇಳಿದರು: ಎಲ್ಲಿ? ಅವರು ಬನೂ ಖುರೈಝದ ಕಡೆಗೆ ಹೊರಟು ಹೋಗಲು ಸೂಚನೆ ನೀಡಿದರು. ಹಝ್ರತ್ ಆಯಿಶ(ರ) ಹೇಳುತ್ತಾರೆ, ನಾನು ಒಳಗೆ ಹೋದೆ, ಹಝ್ರತ್ ಪೈಗಂಬರ್(ಸ)ರು ಒಳಗೆ ಬಂದಾಗ ಣಾನು ಅವರಿಗೆ ಹೇಳಿದೆ ಯಾ ರಸೂಲಲ್ಲಾಹ್(ಸ)!! ನೀವು ಮಾತನಾಡುತ್ತಿದ್ದ ವ್ಯಕ್ತಿ ಯಾರು? ಅವದಕ್ಕೆ ಅವರು(ಸ) ಹೇಳಿದರು, ನೀವು ಅವನನ್ನು ನೋಡಿದ್ದೀರಾ? ಅದಕ್ಕೆ ನಾನು ಹೌದು ಎಂದು ಹೇಳಿದೆ. ಅವರು(ಸ) ಹೇಳಿದರು, ಅವರು ಯಾರನ್ನು ಹೋಲುತ್ತಿದ್ದರು ಎಂದು ನೀವು ಭಾವಿಸುತ್ತೀರಿ? ಅವರು ಹಝ್ರತ್ ದಹಿಯ ಖಲ್‌ಬಿ ಆಗಿದ್ದರೋ ಎಂದು ಹಝ್ರತ್ ಆಯಿಶ(ರ) ಕೇಳಿದಾಗ ಹಝ್ರತ್ ಪೈಗಂಬರ್(ಸ) ಹೇಳಿದರು: ಅವರಂತೆ ಇದ್ದ ಹಝ್ರತ್ ಜಿಬ್ರೀಲ್(ಅ) ಆಗಿದ್ದರು. ಇಲ್ಲಿ ದೇವದೂತರು ತಮ್ಮ ಆಯುಧಗಳನ್ನು ತ್ಯಜಿಸಲಿಲ್ಲ ಎಂಬುದು ಸ್ಪಷ್ಟವಾಯಿತು. ಜಿಬ್ರೀಲ್ ಅವರು ನನಗೆ ಬನೂ ಖುರೈಝಾರ ಕಡೆಗೆ ಹೋಗಲು ನನಗೆ ಜಿಬ್ರೀಲ್ ಹೇಳುತ್ತಿದ್ದರು.

ಬನೂ ಖುರೈಝದ ಕಡೆಗೆ ಹೊರಡಲು ಮತ್ತು ಅಲ್ಲೇ ಅಸರಿನ ನಮಾಝ್ ನಿರ್ವಹಿಸಲು ಹಝ್ರತ್ ಪೈಗಂಬರ್(ಸ) ಘೋಷಿಸಿದರು.

ಘೋಷಣೆ ಆಲಿಸುತ್ತಲೇ ಸಹಾಬಿಯರು ಬೇಗನೇ ಹೊರಟರು. ಅಸರಿನ ನಮಾಝ್‌ನ ಸಮಯ ಮುಕ್ತಾಯವಾಗುವುದು ಎಂಬ ಸಂದೇಹದಿಂದ ಕೆಲವು ಸಹಾಬಿಯರು ಮಾರ್ಗದಲ್ಲೇ ನಮಾಝ್ ನಿರ್ವಹಿಸಿದರು ಮತ್ತು ಕೆಲವು ಸಹಾಬಿಯರು ಬನೂ ಖುರೈಝಾಕ್ಕೆ ಹೋಗಿ ಅಸರ್ ನಮಾಝ್ ನಿರ್ವಹಿಸಿದರು. ಅಷ್ಟರಲ್ಲಿ ಸೂರ್ಯಾಸ್ತಮಯವಾಗಿತ್ತು. ಎರಡೂ ಗುಂಪಿನೊಡನೆ ಹಝ್ರತ್ ಪೈಗಂಬರ್(ಸ) ಏನೂ ಹೇಳಲಿಲ್ಲ.

ಹಝ್ರತ್ ಪೈಗಂಬರ್(ಸ) ಹಝ್ರತ್ ಅಲಿ(ರ)ರನ್ನು ಕರೆದು ಅವರಿಗೆ ಸೇನೆಯ ಕಪ್ಪು ಬಣ್ಣದ ಇಖಾಬ್ ಎಂಬ ಹೆಸರಿನ ಧ್ವಜವನ್ನು ನೀಡಿದರು. (ಸಹೀಹ್ ಬುಖಾರಿ ಕಿತಾಬುಲ್ ಮುಘಾಜಿ ಅಧ್ಯಾಯ ಮರ್ಜಾ ಅನ್ನಬೀ(ಸ), ಮಿನಲ್ ಅಹ್‌ಝಾಬಿ....... ಹದೀಸ್-4122, 4119, 4117) (ಫತ್‌ಹಲ್ ಬರಿ, ಸಂಪುಟ-7, ಪುಟ-519-520, ಖದೀಮಿ ಕುತುಬ್ ಖಾನ ಕರಾಚಿ) (ಸಬ್ಲುಲ್ ಹುದಾ ವರ್‍ರಶಾದ್, ಸಂಪುಟ-5, ಪುಟ-3,4, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್ 1993) (ಅಸ್ಸಹೀಹ್ ಮಿನ್ ಸೀರತುನ್ನಬೀ(ಸ), ಸಂಪುಟ-12, ಪುಟ-10, ಅಲ್‌ಮರ್ಕಝುಲ್ ಇಸ್ಲಾಮಿ ಲಿದ್ದರಾಸಾತ್)

ಈ ವಿವರವನ್ನು ಸಹೀಹ್ ಬುಖಾರಿ ಮತ್ತು ಕೆಲವು ಐತಿಹಾಸಿಕ ಪುಸ್ತಕಗಳಲ್ಲಿ ವಿವರಿಸಲಾಗಿದೆ. ಹೆಚ್ಚಿನ ವಿವರವೆಂದರೆ, ಮೊತ್ತಮೊದಲಾಗಿ ಹಝ್ರತ್ ಪೈಗಂಬರ್(ಸ) ಹಝ್ರತ್ ಅಲಿ(ರ)ರನ್ನು ಒಂದು ಸಂಘದೊಂದಿಗೆ ಮುಂಚೂಣಿ ಸೈನ್ಯವಾಗಿ ಕಳುಹಿಸಿದರು. ಅನಂತರ ಸ್ವತಃ ಅವರ ಹಿಂದೆ ಹೊರಟು ಹೋದರು. (ಶರ್ಹ್ ಅಲ್-ಝುರ್ಕಾನಿ ಅಲಲ್-ಮವಾಹಿಬ್ ಅಲ್-ದುನ್ನಿಯಾ, ಸಂಪುಟ-3, ಪುಟ-68, 69, ದಾರುಲ್ ಕುತುಬ್ ಇಲ್‌ಮಿಯಾ 1996)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಅವರು ಈ ಬಗ್ಗೆ ಹೀಗೆ ಬರೆದಿದ್ದಾರೆ: "ಹಝ್ರತ್ ಪೈಗಂಬರ್(ಸ) ಅವರು ಖಂದಕ್ ಯುದ್ಧವನ್ನು ಮುಗಿಸಿ ನಗರಕ್ಕೆ ಹಿಂತಿರುಗಿದಾಗ, ಅವರು ತಮ್ಮ ಆಯುಧಗಳನ್ನು ಕೆಲಗಿರಿಸಿ ಸ್ನಾನವನ್ನು ಮುಗಿಸಿದರು, ಅಷ್ಟರಲ್ಲಿ ಅವರು ದೈವದರ್ಶನ ಮೂಲಕ ತಿಳಿದಿಕೊಂಡಿದ್ದೇನೆಂದರೆ ಬನೂ ಖುರೈಝಾ ಅವರ ವಿಶ್ವಾಸಘಾತುಕತನ ಮತ್ತು ದ್ರೋಹದ ಬಗ್ಗೆ ನಿರ್ಧಸಿಸುವುದಕ್ಕೆ ಮುಂಚೆ ತಮ್ಮ ಆಯುಧಗಳನ್ನು ಕೆಳಗಿರಿಸದಂತೆ ಸೂಚಿಸಲಾಯಿತು. ತದನಂತರ ನೀವು(ಸ) ನಿಲ್ಲದೆ ತಕ್ಷಣ ಬನು ಖುರೈಝಾರ ಕಡೆಗೆ ಮುಂದುವರಿಯಲು ಸೂಚಿಸಲಾಯಿತು. ಈ ಬಗ್ಗೆ ಅವರು(ಸ) ತಮ್ಮ ಸಹಾಬಿಗಳ ನಡುವೆ ಸಾಮಾನ್ಯ ಘೋಷಣೆ ಮಾಡಿದರು, ಎಲ್ಲರೂ ಬನು ಖುರೈಝಾರ ಕೋಟೆಗಳಿಗೆ ಹೋಗಿ ಅಲ್ಲಿಗೆ ತಲುಪಿದ ನಂತರ ಅಸ್ರ್ ನಮಾಝ್ ನಿರ್ವಹಿಸಬೇಕು ಮತ್ತು ಅವರು(ಸ) ಹಝ್ರತ್ ಅಲಿ(ರ) ಅವರನ್ನು ಸಹಾಬಿಗಳ ಒಂದು ಗುಂಪಿಸೊಂದಿಗೆ ಮುಂಚೂಣಿಯಲ್ಲಿ ಕಳುಹಿಸಿದರು. (ಸೀರತ್ ಖಾತಮುನ್ನಬಿಯೀನ್(ಸ), ಹಝ್ರತ್ ಸಾಹಿಬ್ಝಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಎಂ.ಎ, ಪುಟ-597)

ಈ ಹಿಂದೆ ಹಝ್ರತ್ ಆಯಿಷಾ(ರ) ಅವರ ಬಗ್ಗೆಯೂ ಈ ಹೇಳಿಕೆ ನೀಡಲಾಗಿತ್ತು. ಆದಾಗ್ಯೂ, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್(ರ) ಅವರು ಬರೆದಂತೆ ಇದು ದೈವದರ್ಶನವಾಗಿತ್ತು ಮತ್ತು ಹಝ್ರತ್ ಆಯಿಷಾ(ರ) ಕೂಡ ಈ ದರ್ಶನದ ಸ್ಥಿತಿಯಲ್ಲಿ ನೋಡಿರಬಹುದು ಮತ್ತು ಅದು ಹಾಗೆಯೇ ಸಂಭವಿಸಿದೆ.

ಬನು ಖುರೈಝಾರ ಕಡೆಗೆ ಹೊರಡುವ ಉಲ್ಲೇಖವು ಈ ಕೆಳಗಿನ ರೀತಿಯಲ್ಲಿ ಕಂಡುಬರುತ್ತದೆ: ಹಝ್ರತ್ ಪೈಗಂಬರ್(ಸ) ಅವರು ಹಝ್ರತ್ ಇಬ್ನ್ ಉಮ್ಮ್ ಮಖ್ತೂಮ್(ರ) ಅವರನ್ನು ಮದೀನಾದ ಉಸ್ತುವಾರಿಯಾಗಿ ನೇಮಿಸಿದರು ಮತ್ತು ಅವರು ಬನು ಖುರೈಝಾರ ಬಳಿಗೆ ಬುಧುವಾರ ದಿನದಂದು ತೆರಳಿದರು. ಮತ್ತು ಧುಲ್-ಖಅದಕ್ಕೆ ಇನ್ನು ಏಳು ದಿನಗಳು ಉಳಿದಿದ್ದವು. ಹಝ್ರತ್ ಪೈಗಂಬರ್(ಸ)ರು ಆಯುಧಗಳು ಮತ್ತು ರಕ್ಷಾಕವಚಗಳನ್ನು ಧರಿಸಿ ಅವುಗಳನ್ನು ಸ್ವತಃ ತಮ್ಮ ಮೇಲೆ ಇರಿಸಿಕೊಂಡರು ಮತ್ತು ಅವರ ಕೈಯಲ್ಲಿ ಈಟಿ ಮತ್ತು ಅವರ ಕುತ್ತಿಗೆಗೆ ಗುರಾಣಿಯನ್ನು ತೆಗೆದುಕೊಂಡು ತಮ್ಮ ಕುದುರೆ ಲುಹೈಫ್ ಅನ್ನು ಏರಿದರು. ಮುಸ್ಲಿಮರು ಮೂವತ್ತಾರು ಕುದುರೆಗಳನ್ನು ಹೊಂದಿದ್ದರು ಮತ್ತು ಹಝ್ರತ್ ಪೈಗಂಬರ್(ಸ) ಅವರ ಸಹಾಬಿಯರೊಂದಿಗೆ ಹೊರಟರು. ಅವರೊಂದಿಗೆ ಮೂರು ಸಾವಿರ ಜನರಿದ್ದರು ಎಂದು ಇಬ್ನ್ ಸಅದ್ ಹೇಳುತ್ತಾರೆ. ಹಝ್ರತ್ ಅಲಿ(ರ) ಅವರು ಮುಹಾಜಿರಿನ್ ಮತ್ತು ಅನ್ಸಾರ್‌ಗಳ ಗುಂಪಿನೊಂದಿಗೆ ಬನು ಖುರೈಝಾರ ಬಳಿಗೆ ತಲುಪಿದ್ದರು ಎಂದು ಹೇಳಲಾಗಿದೆ. ನಾವು ಬನು ಖುರೈಝಾರ ಬಳಿಗೆ ತಲುಪಿದ್ದೇವೆ ಮತ್ತು ಹಝ್ರತ್ ಅಲಿ(ರ) ಅವರು ಕೋಟೆಯ ಕೆಳಗೆ ಧ್ವಜವನ್ನು ನೆಟ್ಟರು ಎಂದು ಹಝ್ರತ್ ಅಬು ಖತಾದಾ(ರ) ಹೇಳುತ್ತಾರೆ. ಅವರು ನಮ್ಮನ್ನು ನೋಡಿದಾಗ, ಅವರಿಗೆ ಯುದ್ಧದ ಬಗ್ಗೆ ಮನವರಿಕೆಯಾಯಿತು. ನಂತರ ಅವರು ತಮ್ಮ ಕೋಟೆಗಳಿಗೆ ಬೀಗ ಹಾಕಿಕೊಂಡು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಮತ್ತು ಅವರ ಧರ್ಮಪತ್ನಿಯರನ್ನು ನಿಂದಿಸಲು ಪ್ರಾರಂಭಿಸಿದರು. ಹಝ್ರತ್ ಅಬು ಖತಾದ(ರ) ಹೇಳುತ್ತಾರೆ: ನಾವು ಅವರ ಈ ಅವಮಾನಗಳಿಗೆ ಪ್ರತಿಕ್ರಿಯಿಸದೆ ಮೌನವಾಗಿದ್ದೇವು ಮತ್ತು ಈಗ ನಿಮ್ಮ ಮತ್ತು ನಮ್ಮ ನಡುವೆ ಖಡ್ಗ ಮಾತ್ರ ನಿರ್ಧರಿಸುತ್ತದೆ ಎಂದು ಹೇಳಿದರು. ಹಝ್ರತ್ ಪೈಗಂಬರ್(ಸ)ರು ಸಹ ಬನೂ ಖುರೈಝಾರ ಬಳಿಗೆ ತಲುಪಿದರು ಮತ್ತು ಬನು ಖುರೈಝಾರ ಪರ್ವತದ ತಪ್ಪಲಿನಲ್ಲಿರುವ 'ಬಿಅ್‌ರೆ ಉನ್ನಾ'ದಲ್ಲಿ ಅವರ ಕೋಟೆಯ ಬಳಿ ಉಳಿದರು. (ಅತ್ತಬಖಾತುಲ್ ಕುಬ್ರ, ಸಂಪುಟ-2, ಪುಟ-57, ದಾರುಲ್ ಕುತುಬ್ ಇಲ್‌ಮಿಯಾ 1990) (ಸಬ್ಲುಲ್ ಹುದಾ, ಸಂಪುಟ-5, ಪುಟ-5-6, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಇದನ್ನು ಬಿಅ್‌ರೆ ಅನ್ನಾ ಎಂದೂ ಕರೆಯುತ್ತಾರೆ ಮತ್ತು ಇದು ಬನು ಖುರೈಝಾರ ಬಾವಿಗಳಲ್ಲಿ ಒಂದಾಗಿತ್ತು. (ಮುಜಮುಲ್ ಬಲದಾನ್, ಸಂಪುಟ-1, ಪುಟ-355, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಈ ಬಗ್ಗೆ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಅವರು ಸೀರತ್ ಖತಮನ್ನಬಿಯೀನ್(ಸ) ನಲ್ಲಿ ಬರೆದಿರುವ ವಿವರ ಹೀಗಿದೆ: "ಹಝ್ರತ್ ಅಲಿ(ರ) ಅಲ್ಲಿಗೆ ತಲುಪಿದಾಗ, ಅವರು ಬನು ಖುರೈಝಾ (ಅವರಲ್ಲಿ ಖಂದಕ್ ಯುದ್ಧದ ನಂತರ ಬನೂ ನಝೀರ್‌ನ ಸರದಾರ ಮತ್ತು ಈ ಪಿತೂರಿತನದ ಸ್ಥಾಪಕನಾದ ಹುಯ್ಯ್ ಬಿನ್ ಅಖ್ತಬ್ ಕೂಡ ತನ್ನ ವಾಗ್ದಾನದ ಪ್ರಕಾರ ಅವರೊಂದಿಗೆ ಸೇರಿಕೊಂಡಿದ್ದನು) ಅವರು ತಮ್ಮ ವಿಶ್ವಾಸಘಾತಕತನ ಮತ್ತು ದಹರೋಹಕ್ಕೆ ವಿಷಾದ ವ್ಯಕ್ತಪಡಿಸಿ ಕ್ಷಮೆ ಮತ್ತು ಕರುಣೆಯನ್ನು ಕೇಳಬೇಕಾಗಿತ್ತು ಆದರೆ ಅವರು ಬಹಿರಂಗವಾಗಿ ಹಝ್ರತ್ ಪೈಗಂಬರ್(ಸ)ರನ್ನು ನಿಂದಿಸಿದರು ಮತ್ತು ಅನೈತಿಕತೆಯ ರೀತಿಯಲ್ಲಿ ಪರಿಶುದ್ಧ ಧರ್ಮಪತ್ನಿಯರ ಬಗ್ಗೆಯು ಕೆಟ್ಟದಾಗಿ ಮಾತನಾಡಿದರು. ಹಝ್ರತ್ ಅಲಿ(ರ) ಮತ್ತು ಅವರ ಪಡೆಗಳು ಹೊರಟುಹೋದ ಸ್ವಲ್ಪ ಸಮಯದ ನಂತರ, ಹಝ್ರತ್ ಪೈಗಂಬರ್(ಸ)ರು ಸಹ ಶಸ್ತ್ರಸಜ್ಜಿತರಾಗಿ ಮದೀನಾವನ್ನು ತೊರೆದರು. ಆ ಸಮಯದಲ್ಲಿ ಅವರು ಕುದುರೆಯ ಮೇಲೆ ಸವಾರಿ ಮಾಡುತ್ತಿದ್ದರು ಮತ್ತು ಅವರೊಂದಿಗೆ ಒಂದು ದೊಡ್ಡ ಸೈನ್ಯ ಸಹಾಬಗಳಿದ್ದರು. ಹಝ್ರತ್ ಪೈಗಂಬರ್(ಸ)ರು ಬನು ಖುರೈಝಾರ ಕೋಟೆಗಳನ್ನು ತಲುಪಿದಾಗ, ಅವರನ್ನು ಸ್ವಾಗತಿಸಲು ಸ್ವಲ್ಪ ದೂರದಲ್ಲಿ ಹಝ್ರತ್ ಅಲಿ(ರ)ರು ಹಿಂತಿರುಗಿ ಹಝ್ರತ್ ಪೈಗಂಬರ್(ಸ)ರನ್ನು ಹೇಳಿದರು: ಯಾ ರಸೂಲಲ್ಲಾಹ್(ಸ)!! ನೀವು ಸ್ವತಃ ಮುಂಚೂಣಿಯಲ್ಲಿ ಬರುವ ಅಗತ್ಯವಿಲ್ಲ ಎಂದು ನಾನು ಭಾವಿಸುತ್ತೇನೆ. ಇನ್‌ಶಾಅಲ್ಲಾಹ್ ಅವರಿಗೆ ನಾವೇ ಸಾಕು. ಹಝ್ರತ್ ಪೈಗಂಬರ್(ಸ) ಅರ್ಥಮಾಡಿಕೊಂಡು ಕೇಳಿದರು "ಬನೂಖುರೈಝಾದವರು ನನ್ನ ಬಗ್ಗೆ ಏನಾದರೂ ಕೆಟ್ಟದಾಗಿ ಮಾತನಾಡಿದ್ದಾರೆಯೇ?" ಹಝ್ರತ್ ಅಲಿ(ರ) ಅವರನ್ನು ತಡೆಯುತ್ತಿರುವುದನ್ನು ನೀವು ನೋಡಿದರು, ಖಂಡಿತವಾಗಿಯೂ ಅವರು ಏನಾದರೂ ತಪ್ಪಾಗಿ ಹೇಳಿರಬೇಕು ಎಂದು ಅರ್ಥಮಾಡಿಕೊಂಡರು. ಹಝ್ರತ್ ಅಲಿ(ರ) ಹೇಳಿದರು, ಹೌದು ಯಾ ರಸೂಲಲ್ಲಾಹ್(ಸ)! ಹೌದು, ಅದಕ್ಕೆ ಹಝ್ರತ್ ಪೈಗಂಬರ್(ಸ) ಹೇಳಿದರು: ಸರಿ, ಹೋಗೋಣ. **ಖದ್ ಉಝಿಯ ಮೂಸಾ ಬಿ ಅಕ್ಸರ ಮಿನ್ ಹಾಝಾ-** ಅಂದರೆ "ಮೂಸಾ(ಅ) ಅವರಿಗೆ ಈ ಜನರಕ್ಕಿಂತ ಹೆಚ್ಚು ತೊಂದರೆಗಳನ್ನು ಅನುಭವಿಸಿದರು." (ಸೀರತ್ ಖಾತಮುನ್ನಬಿಯೀನ್(ಸ), ಹಝ್ರತ್ ಸಾಹಿಬ್‌ಝಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಎಂ.ಎ, ಪುಟ-597, 598)

ಒಂದು ವರದಿಯ ಪ್ರಕಾರ, ಹಝ್ರತ್ ಪೈಗಂಬರ್(ಸ)ರು ಹಝ್ರತ್ ಅಲಿ(ರ) ಅವರಿಗೆ ಚಿಂತೆ ಮಾಡುವ ಯಾವ ವಿಷಯವಿಲ್ಲ ಎಂದು ಹೇಳಿದರು. ನನ್ನ ಮುಂದೆ ನನ್ನನ್ನು ನಿಂದಿಸುವ ಧೈರ್ಯ ಅವರಿಗಿಲ್ಲ. ಮತ್ತು ಬಹಳ ತೃಪ್ತಿ ಮತ್ತು ಘನತೆಯಿಂದ ಮುಂದುವರೆದರು. (ಸಬ್ಲುಲ್ ಹುದಾ ವರ್‍ರಶಾದ್, ಸಂಪುಟ-5, ಪುಟಗಳು-5,6, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್ 1993)

ಈ ಯುದ್ಧದ ಸಂದರ್ಭದಲ್ಲಿ ಮುಸ್ಲಿಮರ ಆಹಾರದ ಬಗ್ಗೆಯು ಹೀಗೆ ಉಲ್ಲೇಖಿಸಲಾಗಿದೆ ಎಲ್ಲಾ ಸಹಾಬಗಳು ಹಝ್ರತ್ ಪೈಗಂಬರ್(ಸ) ಅವರ ಬಳಿ ಇಶಾದ ಸಮಯದಲ್ಲಿ ಸೇರಿದ್ದರು. ಹಝ್ರತ್ ಸಅದ್ ಬಿನ್ ಉಬಾದ(ರ)ರವರು ಖರ್ಜೂರದ ಒಂದು ಒಂಟೆಯನ್ನು ಹಝ್ರತ್ ಪೈಗಂಬರ್(ಸ) ಮತ್ತು ಮುಸ್ಲಿಮರಿಗೆ ಕಳುಹಿಸಿದರು, ಆ ದಿನ ಹಝ್ರತ್ ಪೈಗಂಬರ್(ಸ) ಹೇಳಿದರು: ಖರ್ಜೂರಗಳು ಎಷ್ಟು ಒಳ್ಳೆಯ ಆಹಾರ! (ಸಬ್ಲುಲ್ ಹುದಾ ವರ್‍ರಶಾದ್, ಸಂಪುಟ-5, ಪುಟ-6, ದಾರುಲ್ ಕುತುಬ್

ಇಲ್‌ಮಿಯ ಬೈರುತ್ 1993)

ಬನೂ ಖುರೈಝದ ಗೋತ್ರವನ್ನು ಮುಸ್ಲಿಮರು ಮುತ್ತಿಗೆ ಹಾಕಿದ ಬಗ್ಗೆ ಇನ್ನಷ್ಟು ವಿವರಣೆ ಹೀಗಿದೆ: ಹಝ್ರತ್ ಪೈಗಂಬರ್(ಸ)ರು, ಸುಹೂರ್ ಸಮಯದಲ್ಲಿ ಮುನ್ನಡೆದರು ಮತ್ತು ಬಿಲ್ಲುಗಾರರನ್ನು ಮುಂದೆ ಇರಿಸಿದರು. ಅವರು ಯಹೂದಿಗಳ ಕೋಟೆಗಳನ್ನು ಸುತ್ತುವರಿದು ಅವರ ಮೇಲೆ ಬಾಣಗಳು ಮತ್ತು ಕಲ್ಲುಗಳನ್ನು ಹೊಡೆದರು ಮತ್ತು ಯಹೂದಿಗಳು ಸಹ ಸಂಜೆಯವರೆಗೆ ತಮ್ಮ ಕೋಟೆಗಳಿಂದ ಬಾಣಗಳನ್ನು ಹೊಡೆಯುವುದನ್ನು ಮುಂದುವರೆಸಿದರು. ನಂತರ ಅವರು ಕೋಟೆಗಳ ಸುತ್ತಲೂ ರಾತ್ರಿ ಕಳೆದರು ಮತ್ತು ಮುಸ್ಲಿಮರು ಪ್ರತಿಯಾಗಿ ಯಹೂದಿಗಳ ಮೇಲೆ ದಾಳಿ ಮಾಡುವುದನ್ನು ಮುಂದುವರೆಸಿದರು. ಹಝ್ರತ್ ಪೈಗಂಬರ್(ಸ)ರು ಯಹೂದಿಗಳು ಸಾಯುವುದು ಖಚಿತವಾಗುವವರೆಗೂ ಅವರ ಮೇಲೆ ಬಾಣಗಳನ್ನು ಹೊಡೆಯುವುದನ್ನು ಮುಂದುವರೆಸಿದರು ಮತ್ತು ಅವರು (ಯಹೂದಿಯರು) ಮುಸ್ಲಿಮರ ಮೇಲೆ ಬಾಣ ಹೊಡೆಯುವುದನ್ನು ನಿಲ್ಲಿಸಿ ಹೀಗೆ ಹೇಳತೊಡಗಿದರು "ನಮ್ಮನ್ನು ಬಿಟ್ಟುಬಿಡಿ, ನಾವು ನಿಮ್ಮೊಂದಿಗೆ ಮಾತನಾಡುತ್ತೇವೆ." ಅದಕ್ಕೆ ಹಝ್ರತ್ ಪೈಗಂಬರ್(ಸ)ರು 'ಸರಿ' ಎಂದು ಹೇಳಿದರು. ಅವರು ನಬ್ಬಾಶ್ ಬಿನ್ ಖೈಸ್ ಅವರನ್ನು ಅವರ(ಸ) ಸನ್ನಿಧಿಗೆ ಕಳುಹಿಸಿದರು. ಬನೂ ನಝೀರ್ ಇಲ್ಲಿಂದ ಹೊರಟು ಹೋದಂತೆ ಮತ್ತು ನಮ್ಮ ಸಂಪತ್ತು ಮತ್ತು ಆಯುಧಗಳನ್ನು ತೆಗೆದುಕೊಂಡು ನಮ್ಮ ರಕ್ತವನ್ನು ಉಳಿಸಿದಂತೆ ಅವರು ಹಝ್ರತ್ ಪೈಗಂಬರ್(ಸ)ರನ್ನು ಕೇಳಿದರು. ನಾವು ನಮ್ಮ ಮಹಿಳೆಯರು ಮತ್ತು ಮಕ್ಕಳೊಂದಿಗೆ ನಿಮ್ಮ ನಗರವನ್ನು ತೊರೆಯುತ್ತೇವೆ. ಯಹೂದಿಯರು ಹೀಗೆ ಪ್ರಸ್ತಾಪಿಸಿದರು. ಮತ್ತು ನಮ್ಮ ಒಂಟೆಗಳಲ್ಲಿ ಒಂದು ಸಾಗಿಸಬಹುದಾದ ಸಾಮಾನು ನಮಗೆ ಇರುತ್ತದೆ. ಆದರೆ ಹಝ್ರತ್ ಪೈಗಂಬರ್(ಸ)ರು ಅದನ್ನು ನಿರಾಕರಿಸಿದರು, ಮತ್ತು ನಂತರ ನಬ್ಬಾಶ್ ಹೇಳಿದರು, "ನಮ್ಮ ಒಂಟೆಗಳು ಸಾಗಿಸುವ ಸಂಪತ್ತಿನ ಸಗತ್ಯ ನಮಗಿಲ್ಲ." ಹಝ್ರತ್ ಪೈಗಂಬರ್(ಸ)ರ ನಿರ್ಧಾರವನ್ನು ಒಪ್ಪಿಕೊಳ್ಳಬೇಕು ಎಂದು ನಿರಾಕರಿಸಿದರು ಆದರೆ ಅವರು ಹಝ್ರತ್ ಪೈಗಂಬರ್(ಸ)ರ ನಿರ್ಧಾರವನ್ನು ಒಪ್ಪಿಕೊಳ್ಳಲು ನಿರಾಕರಿಸುತ್ತ ತನ್ನ ಸಮುದಾಯದ ಬಳಿ ಹಿಂದಿರುಗಿದನು. (ಸಬ್ಲುಲ್ ಹುದಾ ವರ್‌ರಶಾದ್, ಸಂಪುಟ-5, ಪುಟ-6, ದಾರುಲ್ ಕುತುಬ್ ಇಲ್‌ಮಿಯಾ 1993)

ಅದರ ನಂತರ, ಬನು ಖುರೈಝಾರ ಮುಖ್ಯಸ್ಥರೆಲ್ಲರು ಸೇರಿ ಸಮಾಲೋಚನೆ ನಡೆಸಿದರು. ನಬ್ಬಾಶ್ ತನ್ನ ಜನರ ಬಳಿಗೆ ಬಂದು ಎಲ್ಲಾ ಸಂದರ್ಭಗಳನ್ನು ಅವರಿಗೆ ತಿಳಿಸಿದಾಗ ಮತ್ತು ಮುತ್ತಿಗೆ ಸುದೀರ್ಘಗೊಳಿಸಲು ಪ್ರಾರಂಭಿಸಿದಾಗ, ಬನು ಖುರೈಝಾದ ನಾಯಕ ಕಅಬ್ ಬಿನ್ ಅಸದ್ ತನ್ನ ಜನರ ಜನರನ್ನು ಉದ್ದೇಶಿಸಿ ಹೇಳಿದನು, ಅಲ್ಲಾಹ ಆಣೆ! ಇದು ನಿಮ್ಮ ಪರೀಕ್ಷೆಯ ಸಂದರ್ಭವಾಗಿದೆ. ಆದ್ದರಿಂದ ನಾನು ನಿಮಗೆ ಮೂರು ವಿಷಯಗಳನ್ನು ಪ್ರಸ್ತುತಪಡಿಸುತ್ತೇನೆ, ನೀವು ಬಯಸಿದದನ್ನು ಸ್ವೀಕರಿಸಿಕೊಳ್ಳಿ. ಅದಕ್ಕೆ ಅವರು ಅವು ಯಾವುವು? ಎಂದು ಕೇಳಿದರು. ಕಅಬ್ ಬಿನ್ ಅಸದ್ ಹೇಳಿದರು: ನಾವು ಮುಹಮ್ಮದ್(ಸ) ಅವರ ವಿಧೇಯತೆಯನ್ನು ಸ್ವೀಕರಿಸಬೇಕು ಮತ್ತು ಅವರನ್ನು ಸತ್ಯವೆಂದು ಒಪ್ಪಿಕೊಳ್ಳಬೇಕು. ಏಕೆಂದರೆ ಅಲ್ಲಾಹನ ಆಣೆ! ಅವರು ಪ್ರವಾದಿಗಳಾಗಿ ಕಳುಹಿಸಲ್ಪಟ್ಟಿದ್ದಾರೆಂದು ನಿಮಗೆ ತಿಳಿದಿದೆ ಮತ್ತು ನಿಮ್ಮ ಪುಸ್ತಕಗಳಲ್ಲಿ ನೀವು ಓದಿರುವ ಅವರೇ ಆಗಿದ್ದಾರೆ. ಹೀಗೆ ನಾವು ಮುಸ್ಲಿಮರಾದರೆ ನಿಮ್ಮ ರಕ್ತ, ನಿಮ್ಮ ಆಸ್ತಿ ಮತ್ತು ನಿಮ್ಮ ಮಹಿಳೆಯರು ಸುರಕ್ಷಿತವಾಗಿರುತ್ತಾರೆ. ಅಲ್ಲಾಹನ ಆಣೆ! ಮುಹಮ್ಮದ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಪ್ರವಾದಿಯಾಗಿದ್ದಾರೆ ಎಂದು ನಿಮಗೆ ತಿಳಿದಿದೆ ಮತ್ತು ನಾವು ಅವರೊಂದಿಗೆ ಸೇರುವುದನ್ನು ತಡೆಯುವ ಏಕೈಕ ವಿಷಯವೆಂದರೆ ಅವರು ಅರೇಬಿಯಾದಿಂದ ಬಂದವರು ಮತ್ತು ಬನಿ ಇಸ್ರೇಲ್‌ನಿಂದ ಅಲ್ಲ. ಆದ್ದರಿಂದ ಈಗ ಅವರು ಎಲ್ಲಿದ್ದಾನೆ, ಸರ್ವಶಕ್ತನಾದ ಅಲ್ಲಾಹನು ಅವರನ್ನು ಪ್ರವಾದಿಯನ್ನಾಗಿ ಮಾಡಿದ್ದಾನೆ. ಅಂದರೆ ಈಗ ಅವರು ಯಾರೇ ಆಗಿರಲಿ ಅವರನ್ನು ಪ್ರವಾದಿಗಳನ್ನಾಗಿ ಮಾಡಲಾಗಿದೆ. ಇದು ತುಂಬಾ ಸ್ಪಷ್ಟವಾದ ವಿಷಯವಾಗಿದೆ. ಮತ್ತು ಅವನು ಮುಂದುವರಿಸುತ್ತಾ ಹೀಗೆ ಹೇಳತೊಡಗಿದನು: ನಾನು ಈ ಒಡಂಬಡಿಕೆಯನ್ನು ಮುರಿಯಲು ಇಷ್ಟಪಡುವುದಿಲ್ಲ, ಆದರೆ ಈ ತೊಂದರೆ ಮತ್ತು ಪ್ರಯೋಗವು ಈ ಹುಯ್ಯ್ ಬಿನ್ ಅಖ್ತಾಬ್‌ನಿಂದ ಬಂದಿದೆ. ಅವನು ಹತ್ತಿರದಲ್ಲಿ ಕುಳಿತಿದ್ದ. ಮತ್ತೆ ಕಅಬ್ ಹೇಳಿದರು, "ಯಹೂದಿಗಳ ಹಿರಿಯ ವಿದ್ವಾಂಸರಾದ ಇಬ್ನ್ ಜವ್ವಾಸ್ ಅವರು ನಿಮ್ಮ ಬಳಿಗೆ ಬಂದಾಗ ನಿಮಗೆ ಹೇಳಿದ್ದು ನಿಮಗೆ ನೆನಪಿದೆಯೇ? ನಾನು ಶರಾಬು, ವಿನೆಗರ್ ಮತ್ತು ಖರ್ಜೂರದ ಭೂಮಿಯನ್ನು, ಅಂದರೆ ಬೈತುಲ್ ಮುಖದ್ದಸ್ ಭೂಮಿಯನ್ನು ತೊರೆದಿದ್ದೇನೆ ಮತ್ತು ನಾನು ನೀರು, ಖರ್ಜೂರ ಮತ್ತು ಬಾರ್ಲಿಯ ಭೂಮಿಗೆ ಬಂದಿದ್ದೇನೆ ಎಂದು ಅವರು ಹೇಳಿದ್ದರು. ಅದಕ್ಕೆ ಜನರು ಏಕೆ ಎಂದು ಕೇಳಿದರು? ಆಗ ಕಅಬ್ ಬಿನ್ ಅಸದ್ ಹೇಳಿದನು ಆ ಹಿರಿಯ ವಿದ್ವಾಸರು ಹೀಗೆ ಹೇಳಿದ್ದರು: ಈ ಊರಿನಿಂದ ಒಬ್ಬ ಪ್ರವಾದಿಯು ಉದಯಿಸುತ್ತಾನೆ ಮತ್ತು ಆ ಸಮಯದಲ್ಲಿ ನಾನು ಬದುಕಿದ್ದರೆ ನಾನು ಅವನನ್ನು ವಿಧೇಯನಾಗುತ್ತೇನೆ ಮತ್ತು ಅವನಿಗೆ ಸಹಾಯ ಮಾಡುತ್ತೇನೆ ಮತ್ತು ಅವನು ನನ್ನ ಬಳಿಕ ಬಂದರೆ ನಿಮ್ಮನ್ನು ದ್ರೋಹ ಮಾಡದಂತ ನೀವು ಎಚ್ಚರಿಕೆಯಿಂದಿರಿ. ಅದರ ಬಗ್ಗೆ ಮೋಸಹೋಗಬೇಡಿ. ಅಂದರೆ ನೀವು ಅವನನ್ನು ಸ್ವೀಕರಿಸಿಕೊಳ್ಳಿ, ನಿರಾಕರಿಸಬೇಡಿ. ಅವನನ್ನು ಅನುಸರಿಸಿ ಮತ್ತು ಸಹಾಯಕ ಮತ್ತು ಸ್ನೇಹಿತನಾಗಿರಿ. ಮೊದಲ ಮತ್ತು ಕೊನೆಯ ಎರಡೂ ಪುಸ್ತಕಗಳನ್ನು ನಾನು ನಂಬಿದ್ದೇನೆ. ಅದೇನೆಂದರೆ, ಹಝ್ರತ್ ಪೈಗಂಬರ್(ಸ) ಅವರ ಮೇಲೆ ಅವತರಿಸುವ ಗ್ರಂಥ ಮತ್ತು ಅವರಿಗೆ ನನ್ನ ಸಲಾಮ್ ಅನ್ನು ತಿಳಿಸಿರಿ ಮತ್ತು ನಾನು ಅದನ್ನು ದೃಢೀಕರಿಸಿದ್ದೇನೆ ಎಂದು ಹೇಳಿರಿ.

ಮತ್ತೆ ಕಅ್ಬ್ ಹೇಳಿದರು, ಬನ್ನಿ! ನಾವು ಅವರನ್ನು ಅನುಸರಿಸಬೇಕು ಮತ್ತು ದೃಢೀಕರಿಸಬೇಕು, ಅಂದರೆ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರನ್ನು. ಇದನ್ನು ಕೇಳಿದ ಬನು ಖುರೈಝಾದ ಜನರು ಹೇಳಿದರು: ನಾವು ಎಂದಿಗೂ ತೌರಾತ್‌ನ ನಿರ್ಧಾರದಿಂದ ಬೇರ್ಪಡುವುದಿಲ್ಲ, ಅಂದರೆ ಹಝ್ರತ್ ಮೂಸಾ(ಅ) ಅವರ ಪುಸ್ತಕವಾದ ತೌರಾತ್‌ನ ನಿರ್ಧಾರ ಮತ್ತು ನಾವು ಅದನ್ನು ಬೇರೆ ಯಾವುದೇ ಪುಸ್ತಕದೊಂದಿಗೆ ಬದಲಾಯಿಸುವುದಿಲ್ಲ. ಅದಕ್ಕೆ ಕಅಬ್ ಹೇಳಿದರು, ನೀವು ನನ್ನ ಈ ಮಾತನ್ನು ಕೇಳದಿದ್ದಾಗ, ಎರಡನೆಯ ವಿಷಯವೇನೆಂದರೆ, ನಾವು ನಮ್ಮ ಮಕ್ಕಳು ಮತ್ತು ಪತ್ನಿಯರನ್ನು ಕೊಲ್ಲೋಣ, ನಂತರ ನಮ್ಮ ಕತ್ತಿಗಳನ್ನು ಎತ್ತಿಕೊಂಡು ಮುಹಮ್ಮದ್(ಸ) ಮತ್ತು ಅವರ ಸಹಚರರ ಮೇಲೆ ಧುಮುಕೋಣ. ಹೀಗೆ ನಮ್ಮ ಹಿಂದೆ ಯಾವುದೇ ಹೊರೆ ಇರುವುದಿಲ್ಲ. ನಮ್ಮ ಮತ್ತು ಮುಹಮ್ಮದ್(ಸ)ರ ನಡುವೆ ಸರ್ವಶಕ್ತನಾದ ಅಲ್ಲಾಹನು ನಿರ್ಧರಿಸುವನು. ನಾವು ಕೊಲ್ಲಲ್ಪಟ್ಟರೆ ನಾವೇ ಕೊಲ್ಲಲ್ಪಡುತ್ತೇವೆ, ಚಿಂತೆ ಮಾಡಲು ನಮ್ಮ ಹಿಂದೆ ನಮ್ಮ ಪೀಳಿಗೆ ಇರುವುದಿಲ್ಲ. ಮತ್ತು ನಾವು ಮೇಲುಗೈ ಸಾಧಿಸಿದರೆ, ನನ್ನ ವಯಸ್ಸಿನ ಆಣೆ! ನಾವು ಇನ್ನು ಹೆಚ್ಚು ಮಕ್ಕಳು ಮತ್ತು ಪತ್ನಿಯರನ್ನು ಪಡೆಯಬಹುದು. ಜನರು ಹೇಳಿದರು, ನಾವು ಈ ಬಡವರನ್ನು ಕೊಲ್ಲಬೇಕೇ? ಅವರ ನಂತರ ಜೀವನದಲ್ಲಿ ಯಾವ ಆನಂದ ಉಳಿಯುತ್ತದೆ? ಆಗ ಕಅ್ಬ್ ಹೇಳಿದರು, ನೀವು ಇದನ್ನು ಸಹ ನಂಬದಿದ್ದರೆ, ಇಂದು ಸಬ್ಬತ್ ರಾತ್ರಿಯಾಗಿದೆ. ಇಂದು ನಾವು ಯಾವುದೇ ಹಲ್ಲೆ ನಡೆಸಲಾರೆವು ಎಂದು ಮುಹಮ್ಮದ್(ಸ) ಮತ್ತು ಅವರ ಸಹಾಬಿಯರು ಭಾವಿಸುತ್ತಿರಬಹುದು. ಆದ್ದರಿಂದ ಇಂದು ರಾತ್ರಿ ಕೋಟೆಯಿಂದ ಹೊರಟು ಅವರ ಮತ್ತು ಅವರ ಸಹಚರರ ಮೇಲೆ ದಾಳಿ ನಡೆಸೋಣ. ಹಾಗಾದರೆ ನಾವು ಜಯಿಸಬಹುದಾದ ಸಾಧ್ಯತೆ ಹೆಚ್ಚು. ಬನೂ ಖುರೈಝು ಗೋತ್ರದವರು ಮೂರು ಸಲಹೆಗಳನ್ನು ಕೂಡ ಒಪ್ಪಲು ತಯಾರಾಗಲಿಲ್ಲ. ಹೀಗೆ ಸಂಗತಿ ಇದ್ದಕ್ಕಿದ್ದಂತೆ ಉಳಿಯಿತು. ಕಅ್ಬ್‌ನ ನಂತರ ಮತ್ತೊಬ್ಬ ಯಹೂದಿಯಾದ ಅಮ್ರ್ ಬಿನ್ ಸಅ್‌ದಾ ಹೀಗೆ ಹೇಳಿದನು: ಓ ಯಹೂದಿಗಳ ಗುಂಪು! ನೀವು ಮುಹಮ್ಮದ್(ಸ)ರ ಜೊತೆ ಒಪ್ಪಂದ ಮಾಡಿಕೊಂಡಿದ್ದೀರಿ ಮತ್ತು ನಿಮ್ಮ ಮತ್ತು ಅವರ ನಡುವೆ ಇದ್ದ ಒಪ್ಪಂದವನ್ನು ನೀವು ಮುರಿದಿದ್ದೀರಿ. ನಾನು ನಿಮ್ಮ ಒಪ್ಪಂದಕ್ಕೆ ಪಕ್ಷಾತೀತನೂ ಅಲ್ಲ, ನಿಮ್ಮ ವಂಚನೆಯಲ್ಲಿ ನಾನು ಪಾಲುದಾರನೂ ಅಲ್ಲ. ನೀವು ಅವರ ಧರ್ಮವನ್ನು ಪ್ರವೇಶಿಸಲು ನಿರಾಕರಿಸಿದರೆ, ಕನಿಷ್ಟಪಕ್ಷ ಯಹೂದಿ ಧರ್ಮದಲ್ಲಾದರೂ ಸ್ಥಿರವಾಗಿರಿ, ಅವರನ್ನು ನಿರಾಕರಿಸಲು ಬಯಸಿದರೆ, ನೀವು ಯಹೂದಿ ಧರ್ಮದ ಬೋಧನೆಗಳಲ್ಲಿ ಸ್ಥಿರವಾಗಿರಿ ಮತ್ತು ಅವರಿಗೆ ಜಿಝ್ಯವನ್ನು ಪಾವತಿಸಿ. ಅಲ್ಲಾಹನ ಆಣೆ! ಅವರು ಇದನ್ನು ಸ್ವೀಕರಿಸುತ್ತಾರೊ ಇಲ್ಲವೊ ಎಂದು ನನಗೆ ತಿಳಿದಿಲ್ಲ. ಅದಕ್ಕೆ ಅವರು ಹೇಳಿದರು: ನಾವು ನಮ್ಮ ಕತ್ತು ಉಳಿಸಿಕೊಳ್ಳಲು ಅರಬ್ಬರಿಗೆ ಮನ್ನಣೆ ನೀಡುವುದಿಲ್ಲ. ಇದು ಸಾಧ್ಯವಿಲ್ಲ. ನಾವು ಇದನು ನೀಡುವುದಿಲ್ಲ. ಅದಕ್ಕಿಂತ ಉತ್ತಮ ವಧೆಯಾಗಿದೆ. ಆಗ ಆತನು ಅದೇ ರಾತ್ರಿ ಕೋಟೆಯಿಂದ ಹೊರಗೆ ಬಂದನು. ಅವರು ಹಝ್ರತ್ ಪೈಗಂಬರ್(ಸ)ರ ಕಾವಲುಗಾರರನ್ನು ಹಾದುಹೋದನು. ಹಝ್ರತ್ ಮುಹಮ್ಮದ್ ಬಿನ್ ಮುಸ್ಲಿಮಾ(ರ) ಅವರ ಮೇಲ್ವಿಚಾರಕರಾಗಿದ್ದರು. ಅವರು ಹೇಳಿದರು ಯಾರು? ಅದಕ್ಕೆ ಅವರು ನಾನು ಅಮ್ರೊ ಬಿನ್ ಸುಅ್‌ದಾ ಎಂದು ಹೇಳಿದರು, "ಹಝ್ರತ್ ಮುಹಮ್ಮದ್ ಬಿನ್ ಮುಸ್ಲಿಮ(ರ) ಹೋಗು ಎಂದು ಹೇಳಿ **ಅಲ್ಲಾಹುಮ್ಮ ಲಾ ತಹ್ರಿಮ್‌ನೀ ಇಖಾಲತ ಅಸರಾತಿಲ್ ಕಿರಾಮಿ**- ಅಂದರೆ: ಓ ಅಲ್ಲಾಹನೇ! ನನಗೆ ಸಜ್ಜನರ ದೋಷಗಳನ್ನು ಮರೆಮಾಚುವ ಸತ್ಕಾರ್ಯದಿಂದ ನನ್ನನ್ನು ವಂಚಿತಗೊಳಿಸಬೇಡ ಎಂದು ಹೇಳಿದರು. ಹೀಗೆ ಅವರು ಅವರ ದಾರಿಯನ್ನು ಬಿಟ್ಟರು. ಮತ್ತು ಅವನು ಹೊರಗೆ ಬಂದು ಹಝ್ರತ್ ಪೈಗಂಬರ್(ಸ)ರ ಮಸೀದಿಗೆ ಬಂದು ಮುಂಜಾನೆ ಅಲ್ಲಿಂದ ಹೊರಟನು. ಅವನು ಎಲ್ಲಿಗೆ ಹೋದನು ಎಂಬುದು ಗೊತ್ತಾಗಲಿಲ್ಲ. ಇದನ್ನು ಹಝ್ರತ್ ಪೈಗಂಬರ್(ಸ)ರ

ಮುಂದೆ ಪ್ರಸ್ತಾಪಿಸಿದಾಗ, ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದರು: ಆತನ ಪ್ರಾಮಾಣಿಕತೆಯ ಕಾರಣದಿಂದ ಅಲ್ಲಾಹನು ನಿನಗೆ ಮೋಕ್ಷ ನೀಡಿರುವನು. (ಸಬ್ಲುಲ್ ಹುದಾ ವರ್‍ರಶಾದ್, ಸಂಪುಟ–5, ಪುಟ–6 ರಿಂದ 8, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್ 1993)

ಅದೇ ರೀತಿ ಕಳ್‌ಬರ ಈ ಮಾತನ್ನು ಆಲಿಸಿ ಇನ್ನೂ ಮೂರು ವ್ಯಕ್ತಿಗಳು ಅದೇ ರಾತ್ರಿ ಕೋಟೆಯಿಂದ ಹೊರಗೆ ಬಂದು ಇಸ್ಲಾಂ ಸ್ವೀಕಾರ ಮಾಡಿಕೊಂಡರು. ಹೀಗೆ ತಮ್ಮ ಜೀವ, ತಮ್ಮ ಕುಟುಂಬ ಮತ್ತು ತಮ್ಮ ಕರ್ಮಗಳನ್ನು ಸುರಕ್ಷಿತಗೊಳಿಸಿದರು. (ಸಬ್ಲುಲ್ ಹುದಾ ವರ್‍ರಶಾದ್, ಸಂಪುಟ–5, ಪುಟ–6 ರಿಂದ 8, ದಾರುಲ್ ಕುತುಬ್ ಇಲ್ಮೀಯಾ 1993)

ಹಝ್ರತ್ ಅಬೂಲುಬಾಬ(ರ)ರ ಘಟನೆ ಸಹ ಪ್ರಸ್ತಾಪಿಸಲಾಗಿದೆ. ಇದರ ಕುರಿತು ಹೀಗೆ ಬರೆಯಲಾಗಿದೆ: ಬನೂ ಖುರೈಝ ಗೋತ್ರದ ಇಚ್ಛೆ ಪ್ರಕಾರ ಮಾತುಕತೆಗಾಗಿ ಹಝ್ರತ್ ಪೈಗಂಬರ್(ಸ) ಹಝ್ರತ್ ಅಬೂಲುಬಾಬ ಬಿನ್ ಮುಂಧಿರ್ ಅನ್ಸಾರಿ(ರ)ರನ್ನು ಅವರ ಕೋಟೆಯ ಒಳಗೆ ಕಳುಹಿಸಿದರು. ಬನೂ ಖುರೈಝ ಗೋತ್ರದವರು ಕುತಂತ್ರ ಮಾಡಿದರು. ಹಝ್ರತ್ ಅಬೂಲುಬಾಬ(ರ) ಕೋಟೆಯ ಒಳಗೆ ಪ್ರವೇಶಿಸಿದ ಕೂಡಲೇ ಮಹಿಳೆಯರು ಮತ್ತು ಮಕ್ಕಳು ಅವರ ಮುಂದೆ ಅಳಲಾರಂಭಿಸಿದರು. ಹಝ್ರತ್ ಅಬೂಲುಬಾಬ(ರ) ಮನಸ್ಸು ಅವರಿಗಾಗಿ ಮೃದುಗೊಂಡಿತು. ಯಹೂದಿಯರು ಹೇಳಿದರು: ನಾವು ಮುಹಮ್ಮದ್(ಸ)ರ ತೀರ್ಪನ್ನು ಅಂಗೀಕರಿಸಬೇಕು ಎಂಬುದನ್ನಲ್ಲದೇ ಬೇರೆ ಯಾವುದನ್ನೂ ಒಪ್ಪಲು ಅವರು ತಯಾರಿಲ್ಲ. ಹೀಗಿರುವಾಗ ನಾವು ಅವರ ತೀರ್ಮಾನವನ್ನು ಒಪ್ಪಬೇಕೇ? ಆಗ ಹೌದೆಂದು ಹಝ್ರತ್ ಅಬೂಲುಬಾಬ(ರ) ಉತ್ತರಿಸಿದರು ಮತ್ತು ನೀವು ತೀರ್ಪನ್ನು ಒಪ್ಪದಿದ್ದರೆ ನಿಮ್ಮನ್ನು ವಧಿಸಲು ಹಝ್ರತ್ ಪೈಗಂಬರ್(ಸ) ಆದೇಶ ನೀಡುವರು ಎಂಬುದನ್ನು ಸೂಚಿಸುತ್ತಾ ಅವರು ತಮ್ಮ ಕೈಯಿಂದ ತಮ್ಮ ಕುತ್ತಿಗೆಯನ್ನು ಕೊಯ್ಯುವಂತೆ ಮಾಡಿ ತೋರಿಸಿದರು. ಆದರೆ ಅದು ಸಂಪೂರ್ಣ ತಪ್ಪಾದ ಸಂಗತಿಯಾಗಿತ್ತು. ಅಂತಹ ಯಾವುದೇ ಉದ್ದೇಶ ಇರುವುದಾಗಿ ಹಝ್ರತ್ ಪೈಗಂಬರ್(ಸ) ಹೇಳಿರಲಿಲ್ಲ. ಹಝ್ರತ್ ಅಬೂಲುಬಾಬ(ರ) ಹೇಳುತ್ತಾರೆ: ಅಲ್ಲಾಹನಾಣೆ, ನಾನು ಅಲ್ಲಾಹನಿಗೆ ಮತ್ತು ಅಲ್ಲಾಹನ ಪ್ರವಾದಿಗೆ ಮೋಸ ಮಾಡಿದ್ದಾಗಿ ನನಗೆ ಅನಿಸಿತು. ಹಾಗೆ ಸೂಚಿಸಿದ್ದಕ್ಕಾಗಿ ನಾನು ಲಜ್ಜಿತನಾದೆನು. ನಾನು **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್** ಎಂದು ಹೇಳಿದೆ. ಮರಳಿ ಬಂದು ಹಝ್ರತ್ ಪೈಗಂಬರ್(ಸ)ರ ಬಳಿಗೆ ಹೋಗಲಿಲ್ಲ. ಮಸೀದಿಗೆ ಹೋಗಿ ಶಿಕ್ಷೆ ಎಂಬಂತೆ ಸ್ವತಃ ನನ್ನನ್ನು ಕಂಬಕ್ಕೆ ಕಟ್ಟಿ ಹಾಕಿದೆನು. ನಾನು ಸಾಯುವ ವರೆಗೆ ಅಥವಾ ಅಲ್ಲಾಹನು ನನ್ನ ಈ ತಪ್ಪಿಗಾಗಿ ನನ್ನ ಪಶ್ಚಾತ್ತಾಪವನ್ನು ಸ್ವೀಕಾರ ಮಾಡುವ ವರೆಗೆ ಇಲ್ಲಿಂದ ಹೋಗುವುದಿಲ್ಲವೆಂದು ಹೇಳಿದೆ. ಹಝ್ರತ್ ಪೈಗಂಬರ್(ಸ) ಅವರಿಗೆ ಇದರ ಬಗ್ಗೆ ತಿಳಿದಾಗ ಅವರು ಹೇಳಿದರು: ಸರ್ವಶಕ್ತನಾದ ಅಲ್ಲಾಹನು ಅವರ ಬಗ್ಗೆ ಏನು ಬಯಸುತ್ತಾನೆ ಎಂಬುದನ್ನು ನಿರ್ಧರಿಸುವವರೆಗೆ ಅವರನ್ನು ಬಿಟ್ಟುಬಿಡಿ. ಅವರು ನನ್ನ ಬಳಿಗೆ ಬಂದಿದ್ದರೆ, ನಾನು ಅವರಿಗಾಗಿ (ಇಸ್ತಿಗ್‌ಫಾರ್) ಕ್ಷಮಾಯಾಚನೆ ಮಾಡುತ್ತಿದ್ದೆ. ಅವರು ನನ್ನ ಬಳಿಗೆ ಬರದೆ ಹೋದಾಗ, ಅವರನ್ನು ಬಿಟ್ಟುಬಿಡಿ. ಹಝ್ರತ್ ಅಬುಲುಬಾಬ(ರ) ಹೇಳುತ್ತಾರೆ: ನಾನು ತುಂಬಾ ನೋವನ್ನು ಅನುಭವಿಸಿದೆ. ಅನೇಕ ರಾತ್ರಿಗಳವರೆಗೆ ನಾನು ಏನನ್ನೂ ತಿನ್ನಲಿಲ್ಲ ಮತ್ತು ಕುಡಿಯಲಿಲ್ಲ ಮತ್ತು ನಾನು ಜಗತ್ತನ್ನು ತೊರೆಯುವವರೆಗೆ ಅಥವಾ ಸರ್ವಶಕ್ತನಾದ ಅಲ್ಲಾಹನು ನನ್ನ ಪಶ್ಚಾತ್ತಾಪವನ್ನು ಸ್ವೀಕರಿಸುವವರೆಗೆ ನಾನು ಈ ಸ್ಥಿತಿಯಲ್ಲಿಯೇ ಇರುತ್ತೇನೆ ಎಂದು ಹೇಳುತ್ತಿದ್ದೆ. ಮತ್ತು ನಾನು ಕಂಡ ಒಂದು ಕನಸ್ಸನ್ನು ನೆನಪಿಸಿಕೊಳ್ಳುತ್ತಿದ್ದೆ ಅದೇನೆಂದರೆ: ನಾವು ಬನೂ ಖುರೈಝಾವನ್ನು ಮುತ್ತಿಗೆ ಹಾಕಿದಾಗ ನಾನು ಗಬ್ಬು ನಾರುವ ಕಪ್ಪು ಕೆಸರಿನಲ್ಲಿದ್ದೆ, ಅದರಿಂದ ಹೊರಬರಲು ನನಗೆ ಸಾಧ್ಯವಾಗುತ್ತಿರಲಿಲ್ಲ ಎಂದು ನಾನು ಕಂಡೆ. ನಾನು ಅದರ ದುರ್ವಾಸನೆಯಿಂದ ಬಹುತೇಕ ಸತ್ತುಹೋಗುತ್ತಿದ್ದೆ ಅಷ್ಟರಲ್ಲಿ ನಾನು ಕಾಲುವೆಯನ್ನು ನೋಡಿದೆ ಮತ್ತು ನಾನು ಶುದ್ಧವಾಗುವವರೆಗೆ ಅದರಲ್ಲಿ ಸ್ನಾನ ಮಾಡಿದ್ದೇನೆ ಮತ್ತು ನಂತರ ನಾನು ಉತ್ತಮ ಪರಿಮಳವನ್ನು ಹೊಂದಿದ್ದೇನೆ. ನಾನು ಈ ಕನಸ್ಸಿನ ಬಗ್ಗೆ ಹಝ್ರತ್ ಅಬೂಬಕರ್(ರ) ಅವರನ್ನು ಕೇಳಿದೆ, ಅದಕ್ಕೆ ಅವರು ಹೇಳಿದರು, "ನಿಮಗೆ ದುಃಖವನ್ನುಂಟುಮಾಡುವ ವಿಷಯದಿಂದ ನೀವು ಬಾಧಿಸುತ್ತೀರಿ ಮತ್ತು ನಂತರ ನೀವು ಅದರಿಂದ ಮುಕ್ತರಾಗುತ್ತೀರಿ ಎಂದು ಹೇಳಿದರು." ಹಾಗಾಗಿ ನಾನು ಬಂಧಿತನಾಗಿದ್ದಾಗ ಹಝ್ರತ್ ಅಬೂಬಕರ್(ರ) ಅವರ ಮಾತುಗಳನ್ನು ನೆನಪಿಸಿಕೊಳ್ಳುತ್ತಿದ್ದೆ ಮತ್ತು ಅಲ್ಲಾಹನು ನನ್ನ ಪಶ್ಚಾತ್ತಾಪವನ್ನು ಸ್ವೀಕರಿಸುತ್ತಾನೆ ಎಂದು ಆಶಿಸುತ್ತಿದ್ದೆ. ಅವರು ಹೇಳುತ್ತಾರೆ: ದೌರ್ಬಲ್ಯದ ಕಾರಣದಿಂದ ನಾನು ಶಬ್ದವನ್ನೂ ಕೇಳದ ಸ್ಥಿತಿಯಲ್ಲಿ ಉಳಿದಿರಲಿಲ್ಲ. ಕಂಬಕ್ಕೆ ಕಟ್ಟಲಾಗಿತ್ತು. ಹಝ್ರತ್ ಪೈಗಂಬರ್(ಸ)ರವರು ನನ್ನನ್ನು ನೋಡುತ್ತಿದ್ದರು. ಇಬ್ನ್ ಹಿಶಾಮ್ ಹೇಳುತ್ತಾರೆ: ಅವರು ಆರು ರಾತ್ರಿಗಳಿಗೆ ಬಂಧಿಸಲ್ಪಟ್ಟರು. ಅಂತಿಮವಾಗಿ, ಸರ್ವಶಕ್ತನಾದ ಅಲ್ಲಾಹನು ಹಝ್ರತ್ ಅಬುಲುಬಾಬರ ಪಶ್ಚಾತ್ತಾಪದ ಬಗ್ಗೆ ವಚನವನ್ನು ಹೀಗೆ ಅವತರಿಸಿದನು:

**ವಆಖರೂನಅ್‌ತರಫೂ ಬಿಝುನೂಬಿಹಿಮ್ ಖಲತೂ ಅಮಲಾ ಸಾಲಿಹಂ ವ್ವ ಆಖರ ಸೈಯಿಅನ್, ಅಸಾಲ್ಲಾಹು ಅಂಯತೂಬ ಅಲೈಹಿಮ್, ಇನ್ನಲ್ಲಾಹ ಗಫೂರುರ್‍ರಹೀಮ್–** (ಅತ್ತೌಬ: 102)

ತಮ್ಮ ತಪ್ಪನ್ನು ಒಪ್ಪಿಕೊಂಡ ಇನ್ನು ಕೆಲವರು ಸಹ ಇದ್ದಾರೆ. ಅವರು ಸತ್ಕೃತ್ಯಗಳೊಂದಿಗೆ ಬೇರೆ ಕೆಲವು ದುಷ್ಕೃತ್ಯಗಳನ್ನು ಬೆರೆಸಿರುವರು. ಅಲ್ಲಾಹನು ಅವರೆಡೆಗೆ ಕಾರುಣ್ಯದಿಂದ ತಿರುಗಬಹುದು. ಖಂಡಿತವಾಗಿಯೂ ಅಲ್ಲಾಹನು ಕ್ಷಮಾಶೀಲನೂ ಕಾರುಣ್ಯನಿಧಿಯೂ ಆಗಿದ್ದಾನೆ.

ಕೊನೆಗೆ ಅಲ್ಲಾಹನು ಹಝ್ರತ್ ಅಬೂಲುಬಾಬ(ರ)ರ ಪಶ್ಚಾತ್ತಾಪವನ್ನು ಸ್ವೀಕಾರ ಮಾಡಿದನು. ಈ ಕುರಿತು ಹಝ್ರತ್ ಪೈಗಂಬರ್(ಸ)ರಿಗೆ ಸುಹೂರ್ ಸಮಯದಲ್ಲಿ ಖುರ್‌ಆನಿನ ವಚನ ಅವತೀರ್ಣಗೊಂಡಿತು. ಆಗ ಹುಝೂರ್(ಸ)ರು ಹಝ್ರತ್ ಉಮ್ಮೆ ಸಲಮಾ(ರ)ರ ಮನೆಯಲ್ಲಿದ್ದರು.

ಹಝ್ರತ್ ಉಮ್ಮೆ ಸಲಮಾ(ರ) ನುಡಿಯುತ್ತಾರೆ: ಸುಹೂರ್ ಸಮಯದಲ್ಲಿ ಹಝ್ರತ್ ಪೈಗಂಬರ್(ಸ)ರು ನಗುತ್ತಿರುವುದನ್ನು ಕಂಡು ನಾನು ಹೇಳಿದೆ, ಯಾ ರಸೂಲಲ್ಲಾಹ್(ಸ)!! ನೀವು ಏಕೆ ನಗುತ್ತಿರುವಿರಿ? ಅದಕ್ಕೆ ಅವರು(ಸ) ಹೇಳಿದರು: ಅಬುಲುಬಾಬ(ರ) ಅವರಿಗಾಗಿ ಶುಭಸುದ್ದಿ ಇದೆ. ಅದಕ್ಕೆ ನಾನು ಹೇಳಿದೆ, ಯಾ ರಸೂಲಲ್ಲಾಹ್(ಸ), ನಾನು ಅವರಿಗೆ ಈ ಒಳ್ಳೆಯ ಸುದ್ದಿಯನ್ನು ನೀಡುವುದೇ? ಅವರು ಹೇಳಿದರು: ಹೌದು ಅವಶ್ಯಕವಾಗಿ ನೀವು ಶುಭ ಸುದ್ದಿ ನೀಡಬೇಕೆಂದು ಬಯಸಿದರೆ ಅವಶ್ಯಕವಾಗಿ ನಿಡಿರಿ. ನಂತರ ಅವರು ತಮ್ಮ ಕೋಣೆಯ ಬಾಗಿಲಲ್ಲಿ ನಿಂತು ಹೇಳಲು ಪ್ರಾರಂಭಿಸಿದರು: ಓ ಅಬುಲುಬಾಬಾ! ಅಲ್ಲಾಹನು ನಿಮ್ಮ ಪಶ್ಚಾತ್ತಾಪವನ್ನು ಸ್ವೀಕರಿಸಿದ್ದಾನೆಂದು ಸಂತೋಷಪಡಿರಿ. ಜನರು ಅವರನ್ನು ತೆರೆಯಲು ಅವನ ಕಡೆಗೆ ಹೋದರು, ಹಝ್ರತ್ ಅಬುಲುಬಾಬಾ(ರ) ಹೇಳಿದರು, ಇಲ್ಲ, ಹಝ್ರತ್ ಪೈಗಂಬರ್(ಸ)ರು ನನಗೆ ತೆರೆಯುತ್ತಾರೆ. ನಂತರ ಹಝ್ರತ್ ಪೈಗಂಬರ್(ಸ)ರು ಫಜ್ರ್ ನಮಾಝ್‌ಗೆ ಬಂದಾಗ, ಅವರು ತಮ್ಮ ಅನುಗ್ರಹದಾಯಕ ಹಸ್ತದಿಂದ ಅವರನ್ನು ತೆರೆದರು. ಹಝ್ರತ್ ಅಬುಲುಬಾಬ(ರ) ಹೇಳಿದರು, ಯಾ ರಸೂಲಲ್ಲಾಹ್(ಸ)! ನನ್ನ ಪಶ್ಚಾತ್ತಾಪವೆಂದರೆ ನಾನು ಪಾಪಗಳನ್ನು ಮಾಡಿದ ನನ್ನ ಜನರ ಮನೆಗಳನ್ನು ಬಿಟ್ಟು ಹೋಗುತ್ತೇನೆ ಮತ್ತು ನನ್ನ ಎಲ್ಲಾ ಸಂಪತ್ತನ್ನು ಅಲ್ಲಾಹ್ ಮತ್ತು ಅವನ ಸಂದೇಶವಾಹಕರ ಮಾರ್ಗದಲ್ಲಿ ದಾನ ಮಾಡುತ್ತೇನೆ. ಅದಕ್ಕೆ ಹಝ್ರತ್ ಪೈಗಂಬರ್(ಸ)ರು ಹೇಳಿದರು, ಓ ಅಬುಲುಬಾಬಾ!! ನಿಮಗೆ ಮೂರನೇಯ ಒಂದು ಭಾಗ ಸಾಕು. (ಸಬ್ಲುಲ್ ಹುದಾ ವರ್‍ರಶಾದ್, ಸಂಪುಟ–5, ಪುಟ–8, 9, ದಾರುಲ್ ಕುತುಬ್ ಇಲ್‌ಮಿಯಾ 1993)

ಆದಾಗ್ಯೂ, ಹಝ್ರತ್ ಅಬೂಲುಬಾಬ(ರ)ರ ಘಟನೆ ಹದೀಸಿನ ಆರು ಪ್ರಬಲ ಗ್ರಂಥಗಳಲ್ಲಿ ವರದಿಯಾಗಿಲ್ಲ. ಆದರೆ ಚರಿತ್ರೆಗಳಲ್ಲಿ ಇದರ ಪ್ರಸ್ತಾಪವಿದೆ.

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಅವರು ಈ ಘಟನೆಯನ್ನು ವಿವರವಾಗಿ ವಿವರಿಸಿದ್ದಾರೆ. ಅವರು ಬರೆಯುತ್ತಾರೆ: "ಅಂತಿಮವಾಗಿ, ಬನು ಖುರೈಝಾದವರು ಮುತ್ತಿಗೆಯ ತೀವ್ರತೆಯಿಂದ ಬೇಸತ್ತಾಗ, ಅವರು ತಮ್ಮ ಸರಳತೆಯಿಂದ ತಮ್ಮ ಬಳಿಗೆ ಬರಬಹುದಾದ ಯಾವುದೇ ಮುಸಲ್ಮಾನರನ್ನು ತಮ್ಮ ಕೋಟೆಗೆ ಆಹ್ವಾನಿಸಲು ಸೂಚಿಸಿದರು. ಇದರಿಂದಾಗಿ ಹಝ್ರತ್ ಪೈಗಂಬರ್(ಸ) ಅವರ ಬಗ್ಗೆ ಏನನ್ನು ಉದ್ದೇಶಿಸಿದ್ದಾರೆ ಎಂಬುದನ್ನು ತಿಳಿದುಕೊಳ್ಳಲು ಪ್ರಯತ್ನಿಸಿ ಇದರಿಂದ ಅವರು ಅದರ ಬೆಳಕಿನಲ್ಲಿ ಭವಿಷ್ಯದ ಕ್ರಮವನ್ನು ಸೂಚಿಸಬಹುದು ಎಂದಾಗಿತ್ತು. ಆದ್ದರಿಂದ, ಅವರು ಹಝ್ರತ್ ಪೈಗಂಬರ್(ಸ) ಅವರ ಸೇವೆಗೆ ತಮ್ಮ ಒಂದು ದೂತನನ್ನು ಕಳುಹಿಸಿದರು ಮತ್ತು ಅಬುಲುಬಾಬ ಬಿನ್ ಮುಂಧಿರ್ ಅನ್ಸಾರಿ ಅವರನ್ನು ಅವರ ಕೋಟೆಗೆ ಕಳುಹಿಸಲು ವಿನಂತಿಸಿದರು, ಇದರಿಂದ ಅವರು ಅವರೊಂದಿಗೆ ಸಮಾಲೋಚಿಸಬಹುದು. ಅವರು(ಸ) ಅಬುಲುಬಾಬಾಗೆ ಅನುಮತಿ ನೀಡಿದರು ಮತ್ತು ಅವರು ಅವರ ಕೋಟೆಗೆ ಹೋದರು. ಈಗ ಬನೂಖುರೈಝಾರ ಮುಖ್ಯಸ್ಥರು ಅಬುಲುಬಾಬಾ ಕೋಟೆಗೆ ಪ್ರವೇಶಿಸಿದ ತಕ್ಷಣ, ಎಲ್ಲಾ ಯಹೂದಿ ಮಹಿಳೆಯರು ಮತ್ತು ಮಕ್ಕಳು ಅವರ ಸುತ್ತಲೂ ಜಮಾಯಿಸಿ, ಅಳುತ್ತಾ, ಕೂಗುತ್ತಾ, ಅವರ ಹೃದಯದಲ್ಲಿ ತಮ್ಮ ದುಃಖ ಮತ್ತು ದುಃಖವನ್ನು ಮೆಚ್ಚಿಸಲು ಪ್ರಯತ್ನಿಸಬೇಕು ಎಂದು ಸಲಹೆ ನೀಡಿದರು. ಆದ್ದರಿಂದ, ಈ ಕುತಂತ್ರವು ಅಬುಲುಬಾಬಾರ ಮೇಲೆ ನಡೆಯಿತು ಮತ್ತು ಅವರು ಕೋಟೆಗೆ ಹೋದ ತಕ್ಷಣ ಅವರ "ತೊಂದರೆ" ಗೆ ಬಲಿಯಾದರು. ಮತ್ತು ಬನೂಖುರೈಝಾದವರು ಅವರಿಗೆ ಹೀಗೆ ಕೇಳಿದರು: ಓ ಅಬೂಲುಬಾಬ!

ನೀವು ನಮ್ಮ ಪರಿಸ್ಥಿತಿ ನೋಡುತ್ತಿದ್ದೀರಿ ನಾವು ಮುಹಮ್ಮದ್(ಸ)ರ ತೀರ್ಪನ್ನು ಅಂಗೀಕರಿಸಿ ನಮ್ಮ ಕೋಟೆಗಳಿಂದ ಇಳಿದು ಬರಬೇಕೇ? ಆಗ ಹೌದೆಂದು ಹಝ್ರತ್ ಅಬೂಲುಬಾಬ(ರ) ಉತ್ತರಿಸಿದರು ಮತ್ತು ನೀವು ತೀರ್ಪನ್ನು ಒಪ್ಪದಿದ್ದರೆ ನಿಮ್ಮನ್ನು ವಧಿಸಲು ಹಝ್ರತ್ ಪೈಗಂಬರ್(ಸ) ಆದೇಶ ನೀಡುವರು ಎಂಬುದನ್ನು ಸೂಚಿಸುತ್ತಾ ಅವರು ತಮ್ಮ ಕೈಯಿಂದ ತಮ್ಮ ಕುತ್ತಿಗೆಯನ್ನು ಕೊಯ್ಯುವಂತೆ ಮಾಡಿ ತೋರಿಸಿದರು. ಆದರೆ ಅದು ಸಂಪೂರ್ಣ ತಪ್ಪಾದ ಸಂಗತಿಯಾಗಿತ್ತು. ಅಂತಹ ಯಾವುದೇ ಉದ್ದೇಶ ಇರುವುದಾಗಿ ಹಝ್ರತ್ ಪೈಗಂಬರ್(ಸ) ಹೇಳಿರಲಿಲ್ಲ. ಹಝ್ರತ್ ಅಬೂಲುಬಾಬ(ರ) ಹೇಳುತ್ತಾರೆ: ಅಲ್ಲಾಹನಾಣೆ, ನಾನು ಅಲ್ಲಾಹನಿಗೆ ಮತ್ತು ಅಲ್ಲಾಹನ ಪ್ರವಾದಿಗೆ ಮೋಸ ಮಾಡಿದ್ದಾಗಿ ನನಗೆ ಅನಿಸಿತು. ಹಾಗೆ ಸೂಚಿಸಿದ್ದಕ್ಕಾಗಿ ನಾನು ಲಜ್ಜಿತನಾದೆನು. ಅಬುಲುಬಾಬಾ ಅವರ ಆಲೋಚನೆಗಳು ನೋವು ಮತ್ತು ಸಂಕಟದ ಎದುರು ನಿಲ್ಲಲಿಲ್ಲ, ಅಬುಲುಬಾಬಾರವರ ಈ ತಪ್ಪಿನ ಸಾವಿನಿಂದ ಮತ್ತೆ ಮತ್ತೆ ನಿಲ್ಲಲಿಲ್ಲ (ಅದಕ್ಕಾಗಿ ಅವರೇ ನಂತರ ಪಶ್ಚಾತ್ತಾಪ ಪಟ್ಟರು ಮತ್ತು ಈ ಪಶ್ಚಾತ್ತಾಪದಿಂದ ಅವರು ಮಸೀದಿಯ ಸ್ತಂಭಕ್ಕೆ ಹೋಗಿ ಕಟ್ಟಿಕೊಂಡರು. ಹಝ್ರತ್ ಪೈಗಂಬರ್(ಸ) ಅವರನ್ನು ಕ್ಷಮಿಸಿ ಅವರನ್ನು ಬಿಡಿಸಿಕೊಂಡರು) ಇದು ಬನೂಖುರೈಝಾರ ವಿನಾಶಕ್ಕೆ ಕಾರಣವಾಯಿತು ಮತ್ತು ನಾವು ಮುಹಮ್ಮದ್(ಸ)ರ ನಿರ್ಧಾರಕ್ಕೆ ಬರುವುದಿಲ್ಲ ಎಂದು ಅವರು ಹಠಮಾರಿತನದಿಂದ ಹೆಪ್ಪುಗಟ್ಟಿದರು. (ಸೀರ'ತ್ ಖಾತಮನ್ನಬಿಯೀನ್(ಸ), ಹಝ್ರತ್ ಸಾಹಿಬ್ಜಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಎಂ.ದ, ಪುಟ–598, 599)

ಆದಾಗ್ಯೂ, ಇದರ ವಿವರಣೆ ಮುಂದುವರೆಯುವುದು. ಇನ್‌ಶಾಅಲ್ಲಾಹ್. ಪಾಕಿಸ್ತಾನದ ಅಹ್ಮದಿಯರು ಸ್ವತಃ ತಮಗಾಗಿ ದುಆ ಮಾಡಬೇಕು. ಇತ್ತೀಚಿಗೆ ಅವರನ್ನು ಸಾಕಷ್ಟು ಸಂಕಷ್ಟಕ್ಕೆ ಸಿಲುಕಿಸಲು ಪ್ರಯತ್ನಿಸಲಾಗುತ್ತಿದೆ. ಅಲ್ಲಾಹನ ಸಂಪ್ರೀತಿಯನ್ನು ಗಳಿಸಲಿಕ್ಕಾಗಿ ಅವರು ಮೊದಲಿಗಿಂತ ಹೆಚ್ಚು ಪ್ರಯತ್ನಿಸಬೇಕು. ಏಕೆಂದರೆ ಸ್ಥಿತಿಗತಿಗಳು ಕೆಡುತ್ತಾ ಹೋಗುತ್ತಿವೆ. ಅಲ್ಲಾಹನು ಕೃಪೆ ಮತ್ತು ಕರುಣೆದೋರಲಿ.

ಅದೇ ರೀತಿಯಲ್ಲಿ ಲೋಕದಲ್ಲಿ ನೆಲೆಸಿರುವ ಅಹ್ಮದಿಯರು ತಮ್ಮ ಪಾಕಿಸ್ತಾನೀ ಸಹೋದರರಿಗಾಗಿ ದುಆ ಮಾಡಿರಿ. ಅಲ್ಲಾಹನು ಅವರ ಕಷ್ಟತೆಗಳನ್ನು ದೂರ ಮಾಡಲಿ. ಆಮೀನ್. ಅದೇ ರೀತಿಯಲ್ಲಿ ಬಾಂಗ್ಲದೇಶದ ಅಹ್ಮದಿಯರಿಗಾಗಿಯೂ ದುಆ ಮಾಡಿರಿ. ಅವರು ಸ್ವತಃ ತಮಗಾಗಿ ದುಆ ಮಾಡಬೇಕು. ಅಲ್ಲಾಹನು ಎಲ್ಲ ಉಪದ್ರಗಳಿಂದ ಅವರನ್ನು ರಕ್ಷಿಸಲಿ. ಅಲ್ಲೂ ಅಹ್ಮದಿಯರು ಬಹಳಷ್ಟು ತೊಂದರೆಗಳಲ್ಲಿ ಸಿಲುಕಿಕೊಂಡಿರುವರು. ಅಲ್‌ಜಝೀರಾ ಇರಿನ ಅಹ್ಮದಿಯರಿಗಾಗಿಯೂ ದುಆ ಮಾಡಿರಿ. ಅಲ್ಲಾಹನು ಅವರನ್ನು ಎಲ್ಲ ಉಪದ್ರವಗಳಿಂದ ರಕ್ಷಿಸಲಿ. ಅವರನ್ನು ಕೂಡ ಬಂಧಿಸಲಾಗುತ್ತಿದೆ. ಅವರ ವಿಶ್ವಾಸವನ್ನು ಅಲ್ಲಾಹನು ಸುದೃಢವಾಗಿರಿಸಲಿ. ಸೂಡಾನಿನ ಅಹ್ಮದಿಯರು ಕೂಡ ಅಲ್ಲಿನ ಯುದ್ಧ ಪರಿಸ್ಥಿತಿಯ ಕಾರಣದಿಂದ ಕೆಟ್ಟ ಸ್ಥಿತಿಗಳಲ್ಲಿ ಇದ್ದಾರೆ. ಅವರಿಗಾಗಿಯೂ ದುಆ ಮಾಡಿರಿ.

ಎಲ್ಲೆಡೆ ಮುಸ್ಲಿಮರು ಮುಸ್ಲಿಮರ ಕೈಗಳಿಂದ ಕಷ್ಟತೆಗಳಲ್ಲಿ ಸಿಲುಕಿಕೊಂಡಿರುವರು. ಇದೇ ಕಾರಣದಿಂದ ಎದುರಾಳಿಗಳು ಧೈರ್ಯದಿಂದ ಮುಸ್ಲಿಮರಿಗೆ ನಷ್ಟವನ್ನು ಉಂಟುಮಾಡಲು ಪ್ರಯತ್ನಿಸುತ್ತಾರೆ. ಬಹಳಷ್ಟು ದುಆ ಮಾಡಿರಿ. ಇಸ್ರೇಲಿ ಸರ್ಕಾರ, ಅಮೇರಿಕದ ಸರ್ಕಾರ ಮತ್ತು ದೊಡ್ಡ ಪ್ರಬಲ ರಾಷ್ಟ್ರಗಳ ಕೈಗಳನ್ನು ಅಲ್ಲಾಹನಿಗೆ ತಡೆಯಬಹುದಾಗಿದೆ. ಅವನ ಕೈಯಲ್ಲಿ ಎಲ್ಲ ಶಕ್ತಿಯಿದೆ. ಆದರೆ ಅದಕ್ಕಾಗಿ ಮುಸ್ಲಿಮರು ಕೂಡ ತಮ್ಮ ಕೃತ್ಯಗಳನ್ನು ಅಲ್ಲಾಹನ ಸಂಪ್ರೀತಿಗೆ ಅನುಸಾರವಾಗಿ ಮಾಡಬೇಕಾಗಿದೆ. ಪರಸ್ಪರ ಸಹೋದರರಂತೆ ಮಾದರಿ ತೋರಿಸಬೇಕು. ಪರಸ್ಪರ ಭಿನ್ನತೆಗಳನ್ನು ಕೊನೆಗೊಳಿಸಬೇಕಾಗುವುದು. ಆದರೆ ಅದು ನಮಗೆ ಎಲ್ಲೂ ಕಾಣಲು ಸಿಗುತ್ತಿಲ್ಲ. ಅದು ಆಗುವುದಾದರೆ ಮಾತ್ರವೇ ಅಲ್ಲಾಹನ ಸಹಾಯದ ವಾಗ್ದಾನ ಈಡೇರುವುದು. ಅದಿಲ್ಲದೇ ಸಾಧ್ಯವಲ್ಲ. ಮುಸ್ಲಿಮರು ಸತ್ಯವಿಶ್ವಾಸಿಗಳಾಗಿ ಇರಬೇಕಾಗುವುದು. ಅಲ್ಲಾಹನು ನಮಗೂ ಎಲ್ಲ ಮುಸ್ಲಿಮರಿಗೂ ಅದರ ಸೌಭಾಗ್ಯ ನೀಡಲಿ.

**(ಅಲ್–ಫಝ್ಲ್ ಇಂಟರ್‌ನ್ಯಾಶನಲ್, ನವೆಂಬರ್ 1, 2024, ಪುಟ 2–7)**

————————————*****————————————

## ದಿವ್ಯದೂತರು (ಮಲಾಯಿಕ)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ: "ಒಬ್ಬ ಮಹತ್ವಶಾಲಿ ವ್ಯಕ್ತಿ ದೇವನ ಪ್ರಾತಿನಿಧ್ಯದ ಉಡುಗೆಯಿಂದ ಭೂಷಿತರಾಗಿ (ದೇವನ ಖಲೀಫರಾಗಿ) ಮತ್ತು ದೇವವಾಣಿಯಿಂದ ಅನುಗ್ರಹೀತರಾಗಿ ಭೂಮಿಗೆ ಇಳಿಯುವಾಗ ದಿವ್ಯದೂತರ ಮತ್ತು ಪವಿತ್ರಾತ್ಮದ ಅವತರಣ ಅಥವಾ ಭೂಮಿಗೆ ಇಳಿಯುವಿಕೆ ಉಂಟಾಗುತ್ತದೆ.ಪವಿತ್ರಾತ್ಮ ವಿಶಿಷ್ಟವಾಗಿ ದೇವನ ಪ್ರತಿನಿಧಿಗೆ ಲಭಿಸುತ್ತದೆ."

***(ಫತ್‌ಹೆ ಇಸ್ಲಾಮ್; ರೂಹಾನೀ ಖಝಾಇನ್ ಸಂಪುಟ 3, ಪುಟ 12)***

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಹಕ್ಕು ಅವರಿಗಿಲ್ಲ. ಆದ್ದರಿಂದ, ದೇವರು ಇದ್ದಾನೆ ಮತ್ತು ಅವನಲ್ಲಿ ನಂಬಿಕೆ ಹೆಚ್ಚಾದಷ್ಟೂ ಬಲವು ಹೆಚ್ಚಾಗುತ್ತದೆ ಮತ್ತು ಅವನು ಅವನನ್ನು ಬಹಿರಂಗವಾಗಿ ನೋಡುವವರೆಗೂ ಅವನು ಅದೃಶ್ಯ ಅಸ್ತಿತ್ವವಾಗಿ ಕಾಣಲು ಪ್ರಾರಂಭಿಸುತ್ತಾನೆ ಮತ್ತು ನಂತರ ಈ ಶಕ್ತಿಯು ದಿನದಿಂದ ದಿನಕ್ಕೆ ವರ್ಧಿಸುತ್ತದೆ. ಇದು ಜಗತ್ತು ನೋಡಬೇಕಾದ ಒಂದು ವಿಷಯವಾಗಿದೆ, ಆದರೆ ಈ ಶಕ್ತಿಗಳು ಇಂದು ಜಗತ್ತಿನಲ್ಲಿ ಇಲ್ಲ. **(ಮಲ್‌ಫೂಝಾತ್, ಸಂಪುಟ–2, ಪುಟ–43, ಆವೃತ್ತಿ 2018, ಖಾದಿಯಾನ್)**

————————————*****————————————

## ಅನ್ಯ ಗೋತ್ರಗಳೊಂದಿಗೆ ವಿವಾಹ

**ಹಝ್ರತ್ ಮಸೀಹ್ ಮೌಊದ್ ಅಲೂಹಿಸ್ಸಲಾಮ್ ಹೇಳುತ್ತಾರೆ:–**

"ನಮ್ಮ ಸಮುದಾಯದಲ್ಲಿ ಕಂಡುಬರುತ್ತಿರುವ ಒಂದು ಕೆಟ್ಟ ಸಂಪ್ರದಾಯವೇನೆಂದರೆ, ನಮ್ಮೊಳಗಿರುವ ಇತರ ಗೋತ್ರಗಳಿಗೆ ಹೆಣ್ಣು ಕೊಡಲು ಹಾಗೂ ಪಡೆದುಕೊಳ್ಳಲು ಇಷ್ಟಪಡುವುದಿಲ್ಲ. ಇದು ಅಹಂಕಾರ ಮತ್ತು ಮತ್ಸರದಿಂದಾಗಿದೆ. ಇದು ಶರಿಅತ್ತಿಗೆ ಅಪ್ಪಟ ವಿರುದ್ಧವೂ ಆಗಿರುತ್ತದೆ. ಎಲ್ಲಾ ಆದಮ್ ಸಂತತಿಗಳು ಏಕದೇವನ ದಾಸರಾಗಿದ್ದಾರೆ. ಹೆಣ್ಣು ಕೊಡುವ ಪಡೆಯುವ ವಿಷಯದಲ್ಲಿ ಗಮನಿಸಬೇಕಾದ ವಿಷಯವೇನೆಂದರೆ ಅವರು ಭಯಭಕ್ತಿ ಹಾಗೂ ಉತ್ತಮ ನಡತೆ ಹೊಂದಿರುವವರಾಗಿರಬೇಕು ಮತ್ತು ಅವರು ಯಾವುದೇ ರೀತಿಯ ಪಿತೂರಿಗೆ ಕಾರಣರಾಗಿರಬಾರದು.

ನೆನಪಿಡಿರಿ! ಇಸ್ಲಾಮಿನಲ್ಲಿ ಕುಲ, ಗೋತ್ರಗಳ ಕುರಿತು ಯಾವುದೇ ತಾರತಮ್ಯವಿಲ್ಲ. ಕೇವಲ ಭಯಭಕ್ತಿ ಮತ್ತು ಸಾತ್ವಿಕತೆಯೇ ಪ್ರಧಾನವಾಗಿದೆ. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಿದನು: **ಇನ್ನ ಅಕ್ರಮಕುಮ್ ಇಂದಲ್ಲಾಹಿ ಅತ್‌ಖಾಕುಮ್** (ಅಲ್‌ಹುಜರಾತ್:14) ಅಂದರೆ: ನಿಮ್ಮ ಪೈಕಿ ಹೆಚ್ಚು ಸಾತ್ವಿಕನಾರೋ ಖಂಡಿತವಾಗಿಯೂ ಆತನೇ ಅಲ್ಲಾಹನ ದೃಷ್ಟಿಯಲ್ಲಿ ಅತ್ಯಂತ ಗೌರವಾರ್ಹನು."

(ಮಲ್ಫೂಝಾತ್ ಸಂಪುಟ–5, ಪುಟ–48–49, ಮುದ್ರಣ ಖಾದಿಯಾನ್ 2003)

**(ನಝಾರತ್ ಇಸ್ಲಾಹ್–ವ–ಇರ್‌ಶಾದ್ (ಮರ್‌ಕಝಿಯಾ, ಖಾದಿಯಾನ್)**

## ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ರಕ್ಷಿಸಿರಿ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಕಾಲದ ಸ್ಮರಣೀಯ ಪತ್ರಿಕೆ. **"ಅಖ್ಬಾರ್ ಬದರ್"** 1952 ರಿಂದ ಸತತವಾಗಿ ಖಾದಿಯಾನ್ ದಾರುಲ್‌ಅಮಾನಿನಿಂದ ಪ್ರಕಟಗೊಳ್ಳುತ್ತಿದೆ ಮತ್ತು ಅಹ್ಮದೀಯರ ಆಧ್ಯಾತ್ಮಿಕ ಅವಶ್ಯಕತೆಗಳನ್ನು ಪೂರೈಸುತ್ತಿದೆ. ಇದರಲ್ಲಿ ಪವಿತ್ರ ಖುರ್‌ಆನಿನ ಆಯತ್‌ಗಳು, ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರ ಹದೀಸ್‌ಗಳು, ಹಝ್ರತ್ ಮಸೀಹ್ ಮೌಊದ್(ಅ)ರ ಮಲ್‌ಫೂಝಾತ್ ಮತ್ತು ಬರವಣಿಗೆಗಳಲ್ಲದೆ ಹುಝೂರ್ ಅನ್ವರ್(ಅತಬಿಅ)ರವರ ಹೊಸ ಖುತ್‌ಬ ಜುಮುಆ, ಉಪನ್ಯಾಸಗಳು, ಸಂದೇಶಗಳು, ಖುತ್‌ಬ ಜುಮುಆ ಪ್ರಶ್ನೋತ್ತರದ ರೂಪದಲ್ಲಿ ಮತ್ತು ಹುಝೂರ್ ಅನ್ವರ್‌ರವರ ಪ್ರವಾಸದ ವರದಿಗಳು, ಅದೇ ರೀತಿ ಆಧ್ಯಾತ್ಮಿಕ ಮತ್ತು ಲೌಕಿಕ ಜ್ಞಾನಗಳ ಸಂಪತ್‌ಭರಿತ ವರದಿಗಳು ಇರುತ್ತದೆ. ಅವುಗಳನ್ನು ಅಧ್ಯಯನ ಮಾಡುವುದು, ಅವುಗಳನ್ನು ಅನ್ಯರಿಗೆ ತಲುಪಿಸುವುದು ಮತ್ತು ಅದರಿಂದ ತಮ್ಮ ಮತ್ತು ತಮ್ಮ ಮಕ್ಕಳ, ಕುಟುಂಬದವರ ತರಬೇತಿ ಮಾಡುವುದು ನಮ್ಮ ಕರ್ತವ್ಯವಾಗಿದೆ. ಈ ಎಲ್ಲಾ ಉದ್ದೇಶಗಳನ್ನು ಪಡೆಯುವುದಕ್ಕೆ ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ಕಾಪಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಆಧ್ಯಾತ್ಮಿಕ ಜ್ಞಾನ ಮತ್ತು ತರಬೇತಿಯನ್ನೂ ಒಳಗೊಂಡಿರುವ ಈ ಪವಿತ್ರವಾದ ಪತ್ರಿಕೆಯು ಅವಶ್ಯಕತೆ ಏನೆಂದರೆ ಅದನ್ನು ಗೌರವಿಸಬೇಕು. ಆದ್ದರಿಂದ ಇದನ್ನು ರದ್ದಿಗೆ ಹಾಕುವುದು ಅದರ ಪಾವಿತ್ರ್ಯತೆಯನ್ನು ಚದುರಿಸುವ ಸಮಾನವಾಗಿದೆ. ಅದನ್ನು ರಕ್ಷಿಸಲು ಕಷ್ಟವಾಗುತ್ತಿದ್ದರೆ ಅದನ್ನು ಎಚ್ಚರಿಕೆಯಿಂದ ನಾಶಮಾಡಿರಿ. ಏಕೆಂದರೆ ಹೀಗೆ ಆ ಪವಿತ್ರ ಬರಹಗಳು ಅವಮಾನವಾಗಬಾರದು. ಅಹ್ಮದಿ ಸದಸ್ಯರೆಲ್ಲರೂ ಈ ಬಗ್ಗೆ ವಿಶೇಷ ಗಮನ ಹರಿಸುತ್ತೀರ ಮತ್ತು ಇದರಿಂದ ಉಪಯೋಗ ಗಳಿಸುವಿರೀ ಎಂದು ಆಶಿಸುತ್ತೇವೆ. **(ಸಂಪಾದಕರು)**

**'ಬದರ್' ವಾರಪತ್ರಿಕೆಯನ್ನು Online ಮುಖಾಂತರ ಓದಲು ಸಂಪರ್ಕಿಸಿ ನಮ್ಮ ವೆಬ್‌ಸೈಟ್:**
**https://akhbarbadr.in/Kannada/#gsc.tab=0**

## (ಬದರ್ ಸಂಚಿಕೆ-44-45ರ ಪುಟ ಸಂಖ್ಯೆ-10ರ ಖುತ್‌ಬ ಜುಮುಅದ ಉಳಿದ ಭಾಗ)

ಯುದ್ಧವು ಇದೇ ರೀತಿಯಲ್ಲಿ ತನ್ನ ಔನತ್ಯಕ್ಕೆ ತಲುಪಿತ್ತು. ಅತ್ತ ಮಕ್ಕಾದ ಖುರೈಶಿಗಳು ಮತ್ತು ಅವರ ಮಿತ್ರ ಪಕ್ಷಗಳು ಈಗ ಸತತವಾದ ಮುತ್ತಿಗೆಯಿಂದ ಬೇಸತ್ತು ಹೋಗಿದ್ದರು. ಆದಷ್ಟು ಬೇಗ ಯಾವುದಾದರೂ ನಿರ್ಣಾಯಕ ದಾಳಿ ನಡೆಸಿ ಮುಸ್ಲಿಮರನ್ನು ಕೊನೆಗೊಳಿಸಲು ಅವರು ಬಯಸುತ್ತಿದ್ದರು. ಏಕೆಂದರೆ ಯುದ್ಧದ ದೃಷ್ಟಿಕೋನದಲ್ಲಿ, ಮುಸ್ಲಿಮರು ಎಲ್ಲಾ ಕಡೆಯಿಂದ ಸುತ್ತುವರೆದಿದ್ದರು ಮತ್ತು ಬನೂ ಖುರೈಝಾ ಅವರಂತಹ ಅವರ ಮಿತ್ರರು ಮದೀನಾದ ಒಳಗಿದ್ದರು, ಈ ಎಲ್ಲಾ ಅಂಶಗಳು ಸತ್ಯನಿಷೇಧಿಗಳ ಭರವಸೆ ಮತ್ತು ನೈತಿಕತೆಯನ್ನು ವರ್ಧಿಸಲು ಸಾಕಾಗಿದ್ದವು ಮತ್ತು ಈಗ ಅವರು ನಮ್ಮೆಲ್ಲರನ್ನು ಒಂದೇ ಬಾರಿಗೆ ಹಲ್ಲಾ ಮಡಿ ಮದೀನಾವನ್ನು ಧ್ವಂಸಗೊಳಿಸಲು ಯೋಜನೆಗಳನ್ನು ಹೂಡುತ್ತಿದ್ದರು. ಸತ್ಯನಿಷೇಧಿಗಳ ಮುಖಂಡರು ಆ ಯೋಜನೆಗಳನ್ನು ಹಣೆಯುತ್ತಿದ್ದರು. ಆದರೆ ಮತ್ತೊಂದೆಡೆ ಅಲ್ಲಾಹನು ಅವರ ಉದ್ದೇಶಗಳನ್ನು ಮಣ್ಣು ಪಾಲು ಮಾಡಲು ತೀರ್ಮಾನಿಸಿದ್ದನು.

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಹೇಳುತ್ತಾರೆ: ಗ್ತ್‌ಫಾನ್ ಗೋತ್ರಗಳ ಶಾಖೆಯಾದ ಅಶ್‌ಜಅ್‌ಗೆ ಸಂಬಂಧಪಟ್ಟ ಓರ್ವ ವ್ಯಕ್ತಿ ನುಐಮ್ ಬಿನ್ ಮಸ್‌ಊದ್ ಈ ಯುದ್ಧದಲ್ಲಿ ಮುಸ್ಲಿಮರ ವಿರುದ್ಧದ ಹೋರಾಟದಲ್ಲಿ ಇದ್ದನು. ಆದರೆ ಆ ವ್ಯಕ್ತಿ ಮನಸ್ಸಿನಲ್ಲಿ ಮುಸ್ಲಿಮನಾಗಿದ್ದನು. ಆತನು ಇಸ್ಲಾಂ ಧರ್ಮ ಸ್ವೀಕರಿಸಿದ್ದು ಸತ್ಯನಿಷೇಧಿಗಳಿಗೆ ಗೊತ್ತಿರಲಿಲ್ಲ. ಹೀಗೆ ಆತನು ಅದರ ಪ್ರಯೋಜನ ಪಡೆಯುತ್ತಾ ಒಂದು ದಿನ ಮದೀನಕ್ಕೆ ತಲುಪಿದನು ಮತ್ತು ಮೊತ್ತಮೊದಲಾಗಿ ಬನೂ ಖುರೈಝ ಗೋತ್ರದ ಬಳಿಗೆ ಹೋದನು. ನುಐಮ್‌ಗೆ ಬನೂ ಖುರೈಝದ ಮುಖಂಡರೊಂದಿಗೆ ಹಳೆಯ ಗೆಳತನವಿದ್ದ ಕಾರಣದಿಂದ ಆತನು ಬನೂ ಖುರೈಝದ ಮುಖಂಡರೊಡನೆ ಹೀಗೆ ಹೇಳಿದನು: ನೀವು ಮುಹಮ್ಮದ್(ಸ)ರನ್ನು ಮೋಸ ಮಾಡಿ ಗ್ತ್‌ಫಾನ್ ಮತ್ತು ಖುರೈಶಿಯರೊಂದಿಗೆ ಸೇರಿದ್ದು ಸರಿಯಲ್ಲ ಎಂಬುದು ನನ್ನ ಅನಿಸಿಕೆ. ಅವರು ಇಲ್ಲಿ ಕೆಲವು ದಿನಗಳ ಅತಿಥಿಗಳು ಮಾತ್ರವಾಗಿದ್ದಾರೆ. ನೀವಂತೂ ಇಲ್ಲೇ ಇರಬೇಕಾಗಿದೆ. ನೆನಪಿಡಿರಿ, ಖುರೈಶ್ ಮತ್ತು ಗ್ತ್‌ಫಾನ್ ಗೋತ್ರ ಮರಳಿ ಹೋಗುವಾಗ ನಿಮ್ಮನ್ನು ಮುಸ್ಲಿಮರ ಬಳಿಯಲ್ಲೇ ಬಿಟ್ಟು ಹೋಗುವರು. ಆದ್ದರಿಂದ ಕನಿಷ್ಠ ಪಕ್ಷ ನೀವು ಹೀಗೆ ಮಾಡಿರಿ. ನಿಮ್ಮೊಂದಿಗೆ ಯಾವುದೇ ಮೋಸ ನಡೆಯದು ಎಂಬುದನ್ನು ಖಾತರಿಪಡಿಸಲು ಖುರೈಶಿ ಮತ್ತು ಗ್ತ್‌ಫಾನ್ ಗೋತ್ರದ ಕೆಲವು ಜನರನ್ನು ಒತ್ತೆಯಾಳಾಗಿ ನಿಮ್ಮ ಜೊತೆಗೆ ಇರಿಸಿರಿ. ಬನೂ ಖುರೈಝಾದ ಮುಖ್ಯಸ್ಥರು ನುಐಮ್‌ನ ಮಾತುಗಳನ್ನು ಅರ್ಥಮಾಡಿಕೊಂಡರು ಮತ್ತು ನಂತರ ಯಾವುದೇ ತೊಂದರೆಯನ್ನು ಎದುರಿಸಬಾರದೆಂದು ಖುರೈಷಿಗಳಿಂದ ಒತ್ತೆಯಾಳುಗಳನ್ನು ಕೇಳಲು ಒಪ್ಪಿಕೊಂಡರು. ಅನಂತರ ನುಐಮ್ ಬಿನ್ ಮಸ್‌ಊದ್ ಖುರೈಶಿಯರ ಬಳಿಗೆ ಹೋಗಿ ಅವರೊಡನೆ ಹೀಗೆ ಹೇಳಿದನು: ಬನೂ ಖುರೈಝದ ಜನರು ನಿಮ್ಮ ಕುರಿತು ಭಯಪಡುತ್ತಿದ್ದಾರೆ. ನಿಮ್ಮ ಕೆಲವು ವ್ಯಕ್ತಿಗಳನ್ನು ಅವರ ಬಳಿ ಜಾಮೀನಾಗಿ ಇರಿಸಿಕೊಳ್ಳಲು ಅವರು ಬಯಸುತ್ತಿದ್ದಾರೆ. ಆದರೆ ನೀವು ಖಂಡಿತವಾಗಿಯೂ ಅದಕ್ಕೆ ಒಪ್ಪಬೇಡಿರಿ. ಅದೇ ರೀತಿಯಲ್ಲಿ ಆತನು ಬನೂ ಗ್ತ್‌ಫಾನ್ ಗೋತ್ರದೊಂದಿಗೂ ಇಂತಹದ್ದೇ ಮಾತುಗಳನ್ನು ಹೇಳಿದನು. ಮುಸ್ಲಿಮರ ಸಂಖ್ಯೆ ಕಡಿಮೆಯಿರುವುದರಿಂದ ಅವರಿಗೆ ಎದುರಿಸಲು ಸಾಧ್ಯವಾಗದಂತೆ ಮಾಡಲು ಮತ್ತು ಹೇಗಾದರೂ ಅವರ ಪಂಕ್ತಿ ಮುರಿದು ಹೋಗುವಂತಾಗಲು ಹಾಗೂ ದಾಳಿ ಮಾಡುವವರು ಸುಲಭವಾಗಿ ಮದೀನಕ್ಕೆ ಪ್ರವೇಶಿಸುವಂತಾಗಲು ಮುಸ್ಲಿಮರ ಮೇಲೆ ನಾಲ್ಕೂ ಕಡೆಯಿಂದಲೂ ಒಂದೇ ಸಮಯದಲ್ಲಿ ದಾಳಿ ನಡೆಸಲು ಆ ದಿನಗಳಲ್ಲಿ ಖುರೈಶ್ ಮತ್ತು ಗ್ತ್‌ಫಾನ್ ಯೋಜನೆ ಹಾಕಿದ್ದರು. ಈ ಉದ್ದೇಶದಿಂದ ಅವರು ಬನೂ ಖುರೈಝಾ ಅವರಿಗೆ ಹೀಗೆ ಸಂದೇಶವನ್ನು ಕಳುಹಿಸಿದರು: "ಮುತ್ತಿಗೆಯು ದೀರ್ಘವಾಗುತ್ತಿದೆ ಮತ್ತು ಜನರು ಸುಸ್ತಾಗುತ್ತಿದ್ದಾರೆ ಹಾಗಾಗಿ ಎಲ್ಲ ಗೋತ್ರದವರು ಸೇರಿ ನಾಳೆ ಮುಸ್ಲಿಮರ ಮೇಲೆ ಒಗ್ಗಟ್ಟಾಗಿ ದಾಳಿ ನಡೆಸಬೇಕು ಎಂದು ಸೂಚಿಸಿದ್ದೇವೆ. ಆದ್ದರಿಂದ ನಾಳೆಯ ದಾಳಿಗೆ ಸಿದ್ಧರಾಗಿ. ನುಐಮ್ ಬಿನ್ ಮಸ್‌ಊದ್ ಈಗಾಗಲೇ ಬನೂ ಖುರೈಝಾ ಅವರೊಂದಿಗೆ ಮಾತನಾಡಿದ್ದ ಅವರು ಹೀಗೆ ಉತ್ತರಿಸಿದರು: ನಾಳೆ ನಮಗೆ ಸಬ್ಬತ್ ದಿನವಾಗಿದೆ. ಆದ್ದರಿಂದ ನಮಗೆ ಬರಲು ಸಾಧ್ಯವಲ್ಲ. ಅದಲ್ಲದೇ ಎಲ್ಲಿಯ ತನಕ ನೀವು ನಿಮ್ಮ ಕೆಲವು ಜನರನ್ನು ನಮ್ಮ ಬಳಿ ಇರಿಸಿಕೊಳ್ಳುವುದಿಲ್ಲವೋ ಅಲ್ಲಿಯ ತನಕ ನಾವು ಈ ದಾಳಿಯಲ್ಲಿ ಪಾಲ್ಗೊಳ್ಳಲಾರೆವು ಎಂದು ಹೇಳಿದರು. ಬನೂ ಖುರೈಝಾ ಅವರ ಈ ಉತ್ತರವನ್ನು ಕೇಳಿದ ಖುರೈಶ್ ಮತ್ತು ಘತ್‌ಫಾನ್ ಅವರು ಆಶ್ಚರ್ಯಚಕಿತರಾದರು ಮತ್ತು ಬನೂ ಖುರೈಝಾ ಅವರು ನಮ್ಮ ದ್ರೋಹಕ್ಕೆ ಬಗ್ಗಿದ್ದಾರೆ ಎಂಬ ಸತ್ಯವನ್ನು ನುಐಮ್ ಹೇಳಿದ್ದಾರೆ ಎಂದು ಹೇಳಿದರು. ಇನ್ನೊಂದೆಡೆ, ನಾವು ಒತ್ತೆಯಾಳುಗಳನ್ನು ನೀಡುವುದಿಲ್ಲ ಎಂಬ ಖುರೈಶ್ ಮತ್ತು ಘತ್‌ಫಾನ್‌ರ ಉತ್ತರವನ್ನು ಬನೂ ಖುರೈಝಾ ಪಡೆದಾಗ. ಖುರೈಶ್ ಮತ್ತು ಘತ್‌ಫಾನ್‌ರ ಉದ್ದೇಶಗಳು ಒಳ್ಳೆಯದಲ್ಲ ಎಂದು ನುಐಮ್ ನಮಗೆ ಒಳ್ಳೆಯ ಸಲಹೆಯನ್ನು ನೀಡಿದ್ದಾನೆ ಎಂದು ಬನೂ ಖುರೈಝಾ ಹೇಳಿದರು, ಮತ್ತು ಹಾಗೆ ನುಐಮನ ಯೋಜನೆ ಸಫಲವಾಯಿತು. ಉಭಯ ಪಕ್ಷಗಳಲ್ಲೂ ಅಸಮಾಧಾನದ ಸ್ಥಿತಿಯುಂಟಾಯಿತು. ಬನೂ ಗ್ತ್‌ಫಾನ್ ಮತ್ತು ಖುರೈಶಿಯರು ಹೀಗೆ ಸಂದೇಶ ಕಳುಹಿಸಿದರು: "ನಾವು ಒತ್ತೆಯಾಳುಗಳನ್ನು ಕೊಡುವುದಿಲ್ಲ. ನೀವು ಬರುವುದಾದರೆ ಹಾಗೆಯೇ ಬನ್ನಿರಿ." ಗ್ತ್‌ಫಾನ್ ಮತ್ತು ಖುರೈಶಿಯರ ಉದ್ದೇಶ ಸರಿಯಿಲ್ಲ ಎಂದು ಬನೂ ಖುರೈಝ ಗೋತ್ರಕ್ಕೆ ಖಚಿತವಾಯಿತು. ಹೀಗೆ ನುಐಮಿನ ತಂತ್ರ ಯಶಸ್ವಿಯಾಯಿತು. (ಸೀರತ್ ಖಾತಮನ್ನಬಿಯೀನ್(ಸ), ಹಝ್ರತ್ ಸಾಹಿಬ್‌ಜಾದ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ-591-593)

ಹಝ್ರತ್ ಮುಸ್ಲೆಹ್ ಮೌಊದ್(ರ) ಹೇಳಿದರು, "ಕೆಲವು ದಿನಗಳ ನಂತರ, ಎರಡೂ ಪಕ್ಷದವರು ನಿಗದಿತ ಸಮಯದಲ್ಲಿ, ಯಹೂದಿಗಳು ಮತ್ತು ಅವಿಶ್ವಾಸಿಗಳ ಸೈನ್ಯವು ಮುಸ್ಲಿಮರ ಮೇಲೆ ಏಕಕಾಲದಲ್ಲಿ ದಾಳಿ ಮಾಡಬೇಕೆಂದು ನಿರ್ಧರಿಸಿದರು, ಆದರೆ ಆ ಸಮಯದಲ್ಲಿ ಸರ್ವಶಕ್ತನಾದ ಅಲ್ಲಾಹನ ಬೆಂಬಲವು ವಿಚಿತ್ರ ರೀರಿಯಲ್ಲಿ ಕಾಣಿಸಿಕೊಂಡಿತು. ಅದರ ವಿವರಣೆ ಹೀಗಿದೆ: ಘತ್‌ಫಾನ್ ಗೋತ್ರದ ನುಐಮ್ ಎಂಬವನು ಹೃದಯದಲ್ಲಿ ಮುಸಲ್ಮಾನನಾಗಿದ್ದನು. ಈ ವ್ಯಕ್ತಿಯೂ ಸತ್ಯನಿಷೇಧಿಗಳೊಂದಿಗೆ ಬಂದಿದ್ದನು ಆದರೆ ಆತನು ನನಗೆ ಅವಕಾಶಲಭಿಸಿದರೆ ಮುಸ್ಲಿಮರಿಗೆ ಸಹಾಯ ಮಾಡುವೆನು ಎಂದು ಯೋಚಿಸಿದನು. ಒಬ್ಬ ವ್ಯಕ್ತಿಯು ತಾನು ಮಾಡಬಹುದಾದುದನ್ನು ಮಾತ್ರ ಮಾಡಬಲ್ಲನು, ಆದರೆ ಯಹೂದಿಗಳು ಸಹ ಸತ್ಯನಿಷೇಧಿಗಳೊಂದಿಗೆ ಸೇರಿಕೊಂಡಿದ್ದಾರೆ ಮತ್ತು ಈಗ ಸ್ಪಷ್ಟವಾಗಿ ಮುಸ್ಲಿಮರನ್ನು ರಕ್ಷಿಸಲು ಯಾವುದೇ ಮಾರ್ಗವಿಲ್ಲ ಎಂದು ಅವನು ನೋಡಿದಾಗ, ಈ ಪರಿಸ್ಥಿತಿಗಳಿಂದ ಅವನು ತುಂಬಾ ಪ್ರಭಾವಿತನಾದನು, ಆತನು ಹೇಗಾದರೂ ಈ ಪ್ರಲೋಭನೆಯನ್ನು ತಗೆದುಹಾಕಬೇಕೆಂದು ಅವನು ನಿರ್ಧರಿಸಿದನು. ಹಾಗಾಗಿ ಒಂದು ದಿನ ಎರಡೂ ಪಕ್ಷದವರು ಒಟ್ಟಾಗಿ ದಾಳಿ ಮಾಡಬೇಕೆಂದು ನಿರ್ಧರಿಸಿದಾಗ, ಅವರು ಬನೂ ಖುರೈಝಾರ ಬಳಿಗೆ ಹೋಗಿ ಅವರ ನಾಯಕರನ್ನು ಕೇಳಿದರು, "ಅರಬ್ ಸೈನ್ಯವು ಓಡಿಹೋದರೆ, ಮುಸ್ಲಿಮರು ನಿಮ್ಮೊಂದಿಗೆ ಏನು ಮಾಡುತ್ತಾರೆಂದು ಹೇಳಿ? ನೀವು ಮುಸ್ಲಿಮರ ಒಡಂಬಡಿಕೆಗಳು ಮತ್ತು ಒಪ್ಪಂದವನ್ನು ಮುರಿಯುವ ಪರಿಣಾಮವಾಗಿ ನೀವು ಪಡೆಯುವ ಶಿಕ್ಷೆಯನ್ನು ಊಹಿಸಿ. ಅವರ ಹೃದಯಗಳು ಭಯಗೊಂಡವು ಮತ್ತು ನಾವು ಏನು ಮಾಡಬೇಕು? ಎಂದು ಅವರು ಕೇಳಿದರು. ಅದಕ್ಕೆ ನುಐಮ್ ಹೇಳಿದರು, ಅರಬ್ಬರು ಒಗ್ಗಟ್ಟಾಗಿ ದಾಳಿ ಮಾಡಲು ನಿಮ್ಮನ್ನು ಬಯಸಿದಾಗ, ನೀವು ಸತ್ಯನಿಷೇಧಿಗಳನ್ನು ಅವರ ಎಪ್ಪತ್ತು ಜನರನ್ನು ಒತ್ತೆಯಾಳುಗಳಾಗಿ ನಮಗೆ ಕಳುಹಿಸಲು ಹೇಳಿರಿ. ಅವರು ನಮ್ಮ ಕೋಟೆಗಳನ್ನು ರಕ್ಷಿಸುತ್ತಾರೆ ಮತ್ತು ನಾವು ಮದೀನಾದ ಹಿಂಭಾಗದಿಂದ ದಾಳಿ ಮಾಡುತ್ತೇವೆ." ಅಂದರೆ ಮುಸ್ಲಿಮರ ಮೇಲೆ. "ನಂತರ ಅವರು ಅಲ್ಲಿಂದ ಹೊರಟು ಬಹುದೇವತಾವಾದಿಗಳ ನಾಯಕರ ಬಳಿಗೆ ಹೋಗಿ ಅವರಿಗೆ ಹೇಳಿದರು, ಈ ಯಹೂದಿಗಳು ಮದೀನಾದ ನಿವಾಸಿಗಳಾಗಿದ್ದಾರೆ, ಅವರು ಈ ಕ್ಷಣದಲ್ಲಿ ನಿಮಗೆ ದ್ರೋಹ ಮಾಡಿದರೆ, ನೀವು ಏನು ಮಾಡುತ್ತೀರಿ? ಮುಸ್ಲಿಮರನ್ನು ಮೆಚ್ಚಿಸಲು ಮತ್ತು ಅವರ ಅಪರಾಧವನ್ನು ಕ್ಷಮಿಸಲು, ಅವರು ನಿಮ್ಮ ಪುರುಷರನ್ನು ಒತ್ತೆಯಾಳುಗಳಾಗಿ ಕೇಳುತ್ತಾರೆ ಮತ್ತು ಅವರನ್ನು ಮುಸ್ಲಿಮರಿಗೆ ಒಪ್ಪಿಸುತ್ತಾರೆ, ಆಗ ನೀವು ಏನು ಮಾಡುತ್ತೀರಿ? ಅವರು ತಮ್ಮ ನಿರ್ಧಾರದಲ್ಲಿ ದೃಢವಾಗಿದ್ದಾರೆಯೇ ಅಥವಾ ಇಲ್ಲವೇ ಎಂಬುದನ್ನು ನೋಡಲು ನೀವು ಅವರನ್ನು ಪರೀಕ್ಷಿಸಬೇಕು ಮತ್ತು ನಿಯಮಿತ ದಾಳಿಗೆ ನಿಮ್ಮೊಂದಿಗೆ ಸೇರಲು ಶೀಘ್ರದಲ್ಲೇ ಅವರನ್ನು ಆಹ್ವಾನಿಸಬೇಕು. ಈ ಸಲಹೆಯನ್ನು ಸರಿ ಎಂದು ಪರಿಗಣಿಸಿದ ಬಹುದೇವತಾವಾದಿಗಳ ನಾಯಕರು ಮರುದಿನ ಯಹೂದಿಗಳಿಗೆ ನಾವು ಸಾಮೂಹಿಕ ದಾಳಿ ಮಾಡಲು ಬಯಸುತ್ತೇವೆ, ನೀವು ಸಹ ನಾಳೆ ನಿಮ್ಮ ಸೈನ್ಯದೊಂದಿಗೆ ದಾಳಿ ಮಾಡಬೇಕೆಂದು ಸಂದೇಶವನ್ನು ಕಳುಹಿಸಿದರು. ಬನೂ ಖುರೈಝಾ ಹೇಳಿದರು, ಮೊದಲನೇಯದಾಗಿ, ನಾಳೆ ನಮ್ಮ ಸಬ್ಬತ್ ದಿನವಾಗಿದೆ" ಮತ್ತು ನಾವು ಸಬ್ಬತ್ ದಿನದಂದು ದಾಳಿ ಮಾಡುವುದಿಲ್ಲ, "ಆದ್ದರಿಂದ ನಾವು ಆ ದಿನ ಹೋರಾಡಲು ಸಾಧ್ಯವಿಲ್ಲ. ಎರಡನೇಯದಾಗಿ, ನಾವು ಮದೀನಾ ನಿವಾಸಿಗಳಾಗಿದ್ದೇವೆ ಮತ್ತು ನೀವು ಹೊರಗಿನವರು. ನೀವು ಹೋರಾಟ ಬಿಟ್ಟರೆ ನಮ್ಮ ಸ್ಥಿತಿ ಏನಾಗುತ್ತದೆ?

ಆದ್ದರಿಂದ ನೀವು ನಮಗೆ ಎಪ್ಪತ್ತು ಜನರನ್ನು ಒತ್ತೆಯಾಳುಗಳಾಗಿ ನೀಡಿರಿ ನಂತರ ನಾವು ಹೋರಾಟದಲ್ಲಿ ಪಾಲ್ಗೊಳ್ಳುತ್ತೇವೆ. ಸತ್ಯನಿಷೇಧಿಗಳ ಮನದಲ್ಲಿ ಈಗಾಗಲೇ ಸಂದೇಹ ಹುಟ್ಟಿಕೊಂಡಿದ್ದರಿಂದ, ಅವರು ತಮ್ಮ ಬೇಡಿಕೆಯನ್ನು ಈಡೇರಿಸಲು ನಿರಾಕರಿಸಿದರು ಮತ್ತು ನಮ್ಮೊಂದಿಗೆ ನಿಮ್ಮ ಮೈತ್ರಿ ನಿಜವಾಗಿದ್ದರೆ, ಈ ರೀತಿಯ ಬೇಡಿಕೆಗೆ ಅರ್ಥವಿಲ್ಲ ಎಂದು ಹೇಳಿದರು. ಈ ಘಟನೆಯಿಂದ ಅಲ್ಲೊಂದು ಇಲ್ಲೊಂದು ಯಹೂದೀಯರ ಮನದಲ್ಲಿ ಸಂದೇಹಗಳು ಮೂಡತೊಡಗಿದವು, ಸತ್ಯನಿಷೇಧಿಗಳ ಹೃದಯದಲ್ಲಿ ಸಂದೇಹಗಳು ಮೂಡತೊಡಗಿದವು, ನಿಯಮದಂತೆ ಹೃದಯದಲ್ಲಿ ಸಂದೇಹಗಳು ಮೂಡಿದಾಗ ಶೌರ್ಯದ ಮನೋಭಾವವೂ ಮಾಯವಾಗುತ್ತದೆ." (ದೀಬಾಚ ತಫ್ಸೀರ್ ಅಲ್-ಖುರ್‌ಆನ್, ಅನ್ವಾರುಲ್ ಉಲೂಮ್, ಸಂಪುಟ-20, ಪುಟಗಳು 280-281)

ಅದೂ ಅಲ್ಲದೆ ಒಂದು ದಿನ ತೀವ್ರ ಬಿರುಗಾಳಿಯ ರೂಪದಲ್ಲೂ ಅಲ್ಲಾಹನ ವಿಧಿಯು ಮುಸ್ಲಿಮರ ಪರವಾಗಿ ಪ್ರಕಟಗೊಂಡಿತು. ಇದರಿಂದಾಗಿ ಅಹ್‌ಝಾಬ್ ಅನ್ನು ಅಥವಾ ವಿವಿಧ ಗೋತ್ರಗಳು, ಬಹುದೇವತಾವಾದಿಗಳು, ದಾಳಿಕೋರರು ಪಲಾಯನ ಮಾಡಬೇಕಾಯಿತು. ಇದರ ವಿವರಣೆ ಹೀಗಿದೆ ಮತ್ತು ಇಬ್ನೆ ಇಸ್‌ಹಾಖ್ ಅದರ ಬಗ್ಗೆ ಹೀಗೆ ಬರೆದಿದ್ದಾರೆ: ತೀವ್ರ ಚಳಿಯಿದ್ದ ಒಂದು ರಾತ್ರಿ ಸರ್ವಶಕ್ತನಾದ ಅಲ್ಲಾಹನು ಬಿರುಗಾಳಿಯನ್ನು ಕಳುಹಿಸಿದನು. ಅದು ಸತ್ಯನಿಷೇಧಿಗಳ ಮಡಕೆಗಳನ್ನು ಮತ್ತು ಪಾತ್ರೆಗಳನ್ನು ಮಗುಚಿ ಹಾಕಿತು. ಬಲಾಝುರಿ ಹೀಗೆ ಬರೆದಿದ್ದಾರೆ: ಮತ್ತೆ ಸರ್ವಶಕ್ತನಾದ ಅಲ್ಲಾಹನು ಮುಸಲ್ಮಾನರಿಗೆ ಗಾಳಿಯ ಮೂಲಕ ಅವಿಶ್ವಾಸಿಗಳ ವಿರುದ್ಧ ಸಹಾಯ ಮಾಡಿದನು. ಅದು ಹಳದಿ ಬಣ್ಣದ ಬಿರುಗಾಳಿಯಾಗಿದ್ದು ಅವರ ಕಣ್ಣುಗಳನ್ನು ತುಂಬಿತು. ಅದು ಅವರಲ್ಲಿ ದೌರ್ಬಲ್ಯ ಮತ್ತು ಹೇಡಿತನವನ್ನು ಹುಟ್ಟುಹಾಕಿತು, ಮತ್ತು ಸತ್ಯನಿಷೇಧಿಗಳು ಹಿಂತಿರುಗಿ ತಮ್ಮ ಶಿಬಿರದ ಸ್ಥಳಗಳಿಗೆ ಓಡಿಹೋದರು, ಮತ್ತು ಗಾಳಿಯು ಅವರ ಮೇಲೆ ಬೀಸುತ್ತಲೇ ಇತ್ತು ಮತ್ತು ದೇವದೂತರು ಅವರನ್ನು ಆವರಿಸಿದರು. ಹೀಗೆ ಅವರು ಹಿಂತಿರುಗಿದರು.
(ಸಬ್ಲುಲ್ ಹುದಾ ವಲ್-ರಶಾದ್, ಸಂಪುಟ-4, ಪುಟಗಳು 386-387, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಇದನ್ನು ಈ ಕೆಳಗಿನಂತೆ ವಿವರಿಸಿದ್ದಾರೆ: "ನುಐಮ್ ಬಿನ್ ಮಸ್‌ಊದ್ ಅವರ ಈ ಶಾಂತಿ-ಪ್ರೀತಿಯ ಪ್ರಯತ್ನವು ವ್ಯರ್ಥವಾಗುವ ಸಾಧ್ಯತೆಯಿದೆ ಮತ್ತು ತಾತ್ಕಾಲಿಕ ದಾರಿತಪ್ಪುವಿಕೆ ಮತ್ತು ಪತನದ ನಂತರ, ಸತ್ಯನಿಷೇಧಿಗಳ ನಡುವೆ ಏಕತೆ ಮತ್ತು ಸ್ಥಿರತೆಯ ಚೈತನ್ಯವು ಮತ್ತೆ ಹುಟ್ಟುವ ಸಾಧ್ಯತೆಯಿತ್ತು ಆದರೆ ಸರ್ವಶಕ್ತನಾದ ಅಲ್ಲಾಹನ ಕಡೆಯಿಂದ ಒಂದು ವಿಚಿತ್ರವಾದ ಘಟನೆ ಸಂಭವಿಸಿತು ಅದೇನೆಂದರೆ: ಈ ಘಟನೆಗಳ ನಂತರ ರಾತ್ರಿಯಲ್ಲಿ ಬಹಳ ಹಿಂಸಾತ್ಮಕ ಬಿರುಗಾಳಿ ಎದ್ದಿತು, ಇದು ತೆರೆದ ಜಾಗದಲ್ಲಿ ನೆಲೆಗೊಂಡಿದ್ದ ಸತ್ಯನಿಷೇಧಿಗಳ ವಿಶಾಲ ಶಿಬಿರದಲ್ಲಿ ಅಪಾಯಕಾರಿ ಬಿರುಗಾಳಿಯನ್ನು ಹುಟ್ಟುಹಾಕಿತು. ಅದು ಡೇರೆಗಳನ್ನು ಕಿತ್ತು ಹಾಕಿತು. ಡೇರೆಗಳ ಪರದೆಗಳು ಹಾರಿದುಹೋದವು. ಪಾತ್ರೆಗಳು ಒಲೆಗಳಲ್ಲಿ ಉರುಳಿ ಬಿದ್ದವು ಮತ್ತು ಮರಳು ಮತ್ತು ಬೆಣಚುಕಲ್ಲುಗಳ ಮಳೆಯು ಜನರ ಕಿವಿ ಮತ್ತು ಕಣ್ಣುಗಳು ಮತ್ತು ಮೂಗುಗಳನ್ನು ತುಂಬಿತು, ಮತ್ತು ನಂತರ ಅತ್ಯಂತ ಕೆರಳಿಸುವ ವಿಷಯವೆಂದರೆ ಅರಬ್ಬರ ಪ್ರಾಚೀನ ಪದ್ಧತಿಯ ಪ್ರಕಾರ ರಾತ್ರಿಯ ಹೊತ್ತು ಬಹಳ ಭಕ್ತಿಯಿಂದ ರಾಷ್ಟ್ರೀಯ ಬೆಂಕಿಯನ್ನು ಪ್ರಕಾಶಮಾನವಾಗಿ ಇರಿಸಲಾಗಿತ್ತು ಅದು ಮಿಂಚುಹುಳುಗಳಂತೆ ಹಾರಲು ಪ್ರಾರಂಭಿಸಿತು ಮತ್ತು ನಂದಿಸಿತು. ಈ ದೃಶ್ಯಗಳು ದೀರ್ಘವಾದ ಮುತ್ತಿಗೆಯ ಕಷ್ಟತೆಗಳು ಮತ್ತು ಒಗ್ಗಟ್ಟಿನಲ್ಲಿ ಉಂಟಾದ ಪರಸ್ಪರ ಅವಿಶ್ವಾಸದ ಕಹಿ ಅನುಭವಗಳಿಂದ ಮೊದಲೇ ಚಂಚಲಗೊಂಡಿದ್ದ ಮತ್ತು ಸಂಶಯದಿಂದ ಕೂಡಿದ್ದ ಅವಿಶ್ವಾಸಿಗಳ ಹೃದಯಗಳಿಗೆ ಈ ದೃಶ್ಯಗಳಿಂದ ಎಂತಹ ಧಕ್ಕೆ ಉಂಟಾಯಿತು ಎಂದರೆ ಅನಂತರ ಅವರಿಗೆ ಸುದಾರಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಬೆಳಿಗ್ಗೆ ಆಗುವುದಕ್ಕೆ ಮುಂಚಿತವಾಗಿ ಮದೀನದ ದಿಗಂತದಲ್ಲಿ ಸತ್ಯನಿಷೇಧಿಗಳ ಧೂಳು ಇಲ್ಲವಾಗಿ ಸ್ವಚ್ಛಗೊಂಡಿತು. ಬಿರುಗಾಳಿ ಶಕ್ತಗೊಂಡಾಗ ಅಬೂಸುಫ್‌ಯಾನ್ ಆಸುಪಾಸಿನ ಮುಖಂಡರನ್ನು ಕರೆದು ಹೀಗೆ ಹೇಳಿದನು: ನಮ್ಮ ಕಷ್ಟಗಳು ವರ್ಧಿಸುತ್ತಿವೆ. ಈಗ ಇಲ್ಲಿ ಹೆಚ್ಚು ಸಮಯ ನಿಲ್ಲುವುದು ಸಮಂಜಸವಲ್ಲ. ಆದ್ದರಿಂದ ನಾವು ಮರಳಿ ಹೋಗುವುದು ಉತ್ತಮ. ನಾನಂತು ಹೋಗುತ್ತಿದ್ದೇನೆ ಎಂದು ಹೇಳುತ್ತಾ ಆತನು ತನ್ನ ಜನರಿಗೆ ಮರಳಿ ಹೋಗಲು ಆದೇಶ ನೀಡಿದನು. ಅನಂತರ ಆತನು ಒಂಟೆಯಲ್ಲಿ ಸವಾರನಾದನು. ಆದರೆ ಗಾಬರಿಯ ಸ್ಥಿತಿ ಹೇಗಿತ್ತು ಎಂದರೆ, ಒಂಟೆಯ ಹಗ್ಗವನ್ನು ಬಿಚ್ಚಲು ಸಹ ಆತನು ಮರೆತು ಬಿಟ್ಟನು. ಸವಾರನಾದ ನಂತರ ಒಂಟೆ ಚಲಿಸದೇ ಇದ್ದಾಗ ಆತನಿಗೆ ಅದರ ಬಗ್ಗೆ ಗಮನ ಉಂಟಾಯಿತು. ಆ ವೇಳೆ ಇಕ್ರಿಮ ಬಿನ್ ಅಬೂಜಹಲ್ ಸ್ವಲ್ಪ ಕಠಿಣವಾಗಿ ಹೀಗೆ ಹೇಳಿದರು: ಎಲೈ ಅಬೂಸುಫ್‌ಯಾನ್, ನೀನು ಸೇನಾಧಿಪತಿಯಾಗಿ ಇದ್ದುಕೊಂಡು ಸೇನೆಯನ್ನು ಬಿಟ್ಟು ಓಡಿ ಹೋಗುತ್ತಿದ್ದೀಯ. ನಿನಗೆ ಅವರ ಬಗ್ಗೆ ಚಿಂತೆಯೇ ಇಲ್ಲ. ಇದರಿಂದ ಅಬೂಸುಫ್‌ಯಾನ್ ಲಜ್ಜಿತನಾದನು ಮತ್ತು ಒಂಟೆ ಮೇಲಿಂದ ಕೆಳಗೆ ಇಳಿದು ಹೀಗೆ ಹೇಳಿದನು: ನಾನು ಹೋಗುವುದಿಲ್ಲ. ಆದರೆ ನೀವು ಬೇಗ ಬೇಗನೇ ತಯಾರಾಗಿರಿ. ಅನಂತರ ಇತರ ಗೋತ್ರಗಳು ಸಹ ಹೊರಟು ಹೋಗುತ್ತಿರುವುದರ ಮಾಹಿತಿ ಲಭಿಸುತ್ತಲೇ ಅವರು ಸಹ ಬೇಗನೇ ಮರಳಿ ಹೋಗಲು ತಯಾರಾದರು. ಬನೂ ಖುರೈಝ್ ಸಹ ತಮ್ಮ ಕೋಟೆಗಳಿಗೆ ಮರಳಿಹೋದರು. ಅವರ ಜೊತೆಗೆ ಬನೂ ನಝೀರಿನ ಸರದಾರ ಹುಯ್ಯ್ ಬಿನ್ ಅಖ್ತಬ್ ಕೂಡ ಅವರ ಕೋಟೆಗಳಿಗೆ ಹೋದನು. ಹಾಗೆ ಬೆಳಿಗ್ಗೆಯಾಗುವುದಕ್ಕೆ ಮುಂಚೆ ಪೂರ್ತಿ ಮೈದಾನ ಬರಿದಾಯಿತು. ಒಂದು ತಕ್ಷಣದ ಮತ್ತು ಬುದ್ಧಿಯನ್ನು ಬೆರಗುಗೊಳಿಸುವಂತಹ ಬದಲಾವಣೆಯಿಂದ ಮುಸ್ಲಿಮರು ಪರಾಜಯದಿಂದ ಪಾರಾಗಿ ವಿಜಯಿಯಾದರು. (ಸೀರ'ತ್ ಖಾತಮನ್ನಬಿಯೀನ್(ಸ), ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಎಂ.ಎ, ಪುಟ-593-594)

ಹಝ್ರತ್ ಮುಸ್ಲೆಹ್ ಮೌಊದ್(ರ) ಅದರ ವಿವರಣೆಯನ್ನು ಸಹ ಬರೆದಿದ್ದಾರೆ. ಅವರು ಹೇಳುತ್ತಾರೆ: "ಸತ್ಯನಿಷೇಧಿಗಳ ಸೈನ್ಯವು ಅನುಮಾನಗಳನ್ನು ಹೊತ್ತುಕೊಂಡು ರಾತ್ರಿಯಲ್ಲಿ ವಿಶ್ರಾಂತಿ ಪಡೆಯಲು ತಮ್ಮ ಡೇರೆಗಳಿಗೆ ಹೋದರು, ನಂತರ ಸರ್ವಶಕ್ತನಾದ ಅಲ್ಲಾಹನು ದೈವಿಕ ನೆರವಿನ ಇನ್ನೊಂದು ಮಾರ್ಗವನ್ನು ತೆರೆದನು. ರಾತ್ರಿಯ ಸಮಯದಲ್ಲಿ ಒಂದು ಬಲವಾದ ಬಿರುಗಾಳಿ ಬೀಸಿತು, ಅದು ಆ ಡೇರೆಗಳ ಪರದೆಗಳನ್ನು ಮುರಿಯಿತು. ಒಲೆಗಳಿಂದ ಪಾತ್ರೆಗಳನ್ನು ಬೀಳಿಸಿತು ಮತ್ತು ಕೆಲವು ಗೋತ್ರಗಳ ಬೆಂಕಿಯು ಆರಿಹೋಯಿತು. ಅರೇಬಿಯಾದ ಬಹುದೇವತಾವಾದಿಗಳಲ್ಲಿ ರಾತ್ರಿಯಿಡೀ ಬೆಂಕಿಯನ್ನು ಉರಿಯುವ ಪದ್ಧತಿ ಇತ್ತು ಮತ್ತು ಅವರು ಅದನ್ನು ಶುಭ ಶಕುನವೆಂದು ಪರಿಗಣಿಸುತ್ತಿದ್ದರು. ಯಾರ ಬೆಂಕಿ ನಂದಿಹೋಗುತ್ತಿತ್ತು ಆತನು ಇಂದು ನನಗೆ ಅಶುಭ ದಿನವೆಂದು ಭಾವಿಸಿ ತನ್ನ ಡೇರೆಗಳನ್ನು ಹಿಡಿದು ಯುದ್ಧಭೂಮಿಯಿಂದ ಹಿಮ್ಮೆಟ್ಟಿದನು ಹೀಗೆ ಅವನು ಒಂದು ದಿನ ಕಾಯಬೇಕಾಯಿತು ಮತ್ತು ನಂತರ ಸೈನ್ಯವನ್ನು ಸೇರಬೇಕಾಗಿತ್ತು, ಆದರೆ ಇಡೀ ದಿನದ ಜಗಳದಿಂದಾಗಿ ಸೈನ್ಯದ ನಾಯಕರ ಹೃದಯದಲ್ಲಿ ಅನುಮಾನಗಳು ಹುಟ್ಟಿಕೊಳ್ಳುತ್ತಿದ್ದವು. ಹಿಂದೆ ಸರಿದ ಗೋತ್ರಗಳು, ಅವರ ಸುತ್ತಮುತ್ತಲಿನ ಗೋತ್ರಗಳು ಬಹುಶಃ ಯಹೂದಿಗಳು ಮುಸ್ಲಿಮರೊಂದಿಗೆ ರಾತ್ರಿಯ ಸಮಯದಲ್ಲಿ ಅಕ್ರಮಣ ಮಾಡಿರಬಹುದು ಎಂದು ಭಾವಿಸಿದರು ಮತ್ತು ನಮ್ಮ ಸುತ್ತಮುತ್ತಲಿನ ಗೋತ್ರದವರು ಓಡಿಹೋಗುತ್ತಿದ್ದಾರೆ. ಆದ್ದರಿಂದ ಅವರು ಸಹ ತಮ್ಮ ತಮ್ಮ ಡೇರೆಗಳನ್ನು ತ್ವರಿತವಾಗಿ ಮುಚ್ಚಲು ಪ್ರಾರಂಭಿಸಿದರು ಮತ್ತು ಮೈದಾನದಿಂದ ಓಡಿಹೋಗಲು ಪ್ರಾರಂಭಿಸಿದರು. ಈ ಘಟನೆಯ ಸುದ್ದಿ ಅವರಿಗೆ ತಲುಪಿದಾಗ ಅಬುಸುಫ್ಯಾನ್ ತನ್ನ ಡೇರೆಯಲ್ಲಿ ಆರಾಮವಾಗಿ ಮಲಗಿದ್ದನು ಅಷ್ಟರಲ್ಲಿ ಅವನಿಗೆ ಈ ಸುದ್ದಿ ಲಭಿಸಿದಾಗ ಅವನು ಗಾಬರಿಗೊಂಡು ತನ್ನ ಕಟ್ಟಿಹಾಕಿದ ಒಂಟೆಯ ಮೇಲೆ ಹತ್ತಿ ಅದನ್ನು ಒದೆಯಲು ಪ್ರಾರಂಭಿಸಿದನು. ಕೊನೆಗೆ ಅವನ ಸ್ನೇಹಿತರು ಅವನು ಏನು ಮೂರ್ಖತನ ಮಾಡುತ್ತಿದ್ದಾನೆ ಎಂದು ಅವನಿಗೆ ತಿಳಿಮಾತು ಹೇಳಿದರು. ಇದಾದ ನಂತರ ಅವನ ಒಂಟೆಯ ಹಗ್ಗಗಳನ್ನು ಬಿಚ್ಚಲ್ಪಟ್ಟವು ಮತ್ತು ಅವನು ಸಹ ತನ್ನ ಸಹಚರರೊಂದಿಗೆ ಯುದ್ಧಭೂಮಿಯಿಂದ ಓಡಿಹೋದನು." (ದೀಬಾಚ ತಫ್ಸೀರ್ ಅಲ್-ಖುರ್‌ಆನ್, ಅನ್ವಾರುಲ್ ಉಲೂಮ್, ಸಂಪುಟ-20, ಪುಟ-281)

ಸತ್ಯನಿಷೇಧಿಗಳು ಈ ಸ್ಥಿತಿಯಲ್ಲಿದ್ದಾಗ, ಹಝ್ರತ್ ಪೈಗಂಬರ್(ಸ)ರು, ಸತ್ಯನಿಷೇಧಿಗಳ ಬಗ್ಗೆ ವಿಚಾರಿಸಲು ಹುದೈಫಾ ಬಿನ್ ಯಮಾನ್(ರ) ಅವರನ್ನು ಕಳುಹಿಸಿದರು. ಅದರ ವಿವರಣೆಯಲ್ಲಿ, ಸೀರತ್ ಖಾತಮನ್ನಬಿಯೀನ್(ಸ) ನಲ್ಲಿ ಹೀಗೆ ಬರೆಯಲಾಗಿದೆ: "ಅದೇ ರಾತ್ರಿ, ಸತ್ಯನಿಷೇಧಿಗಳು ಈ ರೀತಿ ಯುದ್ಧಭೂಮಿಯಿಂದ ಓಡಿಹೋಗುತ್ತಿರುವಾಗ, ಹಝ್ರತ್ ಪೈಗಂಬರ್(ಸ)ರು ಸುತ್ತಮುತ್ತಲಿನ ಸಹಚರರನ್ನು ಉದ್ದೇಶಿಸಿ ಹೇಳಿದರು. ಈ ಸಮಯದಲ್ಲಿ ಹೋಗಿ ಸತ್ಯನಿಷೇಧಿ ಸೈನ್ಯದ ಪರಿಸ್ಥಿತಿಯನ್ನು ಕಂಡುಹಿಡಿದವರು ನಿಮ್ಮಲ್ಲಿ ಯಾರಾದರು ಇದ್ದಾರೆಯೇ? ಆದರೆ ಸಹಾಬಗಳ ವರದಿ ಮಾಡುತ್ತಾರೆ: ಆ ಸಮಯದಲ್ಲಿ ಚಳಿಯು ತುಂಬಾ ತೀವ್ರವಾಗಿತ್ತು ಮತ್ತು ಭಯ, ಬಳಲಿಕೆ ಮತ್ತು ಹಸಿವಿನ ಸ್ಥಿತಿ ಹೇಗಿತ್ತು ಎಂದರೆ ನಮ್ಮಲ್ಲಿ ಯಾರಿಗೂ ಅದಕ್ಕೆ ಪ್ರತಿಕ್ರಿಯೆಯಾಗಿ ಏನನ್ನೂ ಹೇಳುವ ಅಥವಾ ನಮ್ಮ ಸ್ಥಳದಿಂದ ಚಲಿಸುವ ಶಕ್ತಿ ಯಾರಿಗೂ ಇರಲಿಲ್ಲ. ಅಂತಿಮವಾಗಿ, ಹಝ್ರತ್ ಪೈಗಂಬರ್(ಸ) ಹುಝೈಫಾ ಬಿನ್ ಯಮಾನ್(ರ) ಅವರನ್ನು ಹೆಸರಿನಿಂದ ಕರೆದರು. ಅದಕ್ಕೆ ಅವರು ಚಳಿಯಿಂದ ನಡುಗುತ್ತಾ ಎದ್ದು ಹಝ್ರತ್ ಪೈಗಂಬರ್(ಸ)ರ ಮುಂದೆ ನಿಂತರು. ಹಝ್ರತ್ ಪೈಗಂಬರ್(ಸ.ಅ) ತಮ್ಮ ತಲೆಯ ಮೇಲೆ ಬಹಳ ಸಹಾನುಭೂತಿಯಿಂದ ಕೈಯಿಟ್ಟು ಅವರಿಗಾಗಿ

ಪ್ರಾರ್ಥಿಸಿದರು ಮತ್ತು ಹೇಳಿದರು: ನೀವು ಭಯಪಡಬೇಡಿ ಮತ್ತು ಸಮಾಧಾನವಾಗಿರಿ. ಇನ್ಶಾ ಅಲ್ಲಾಹ್ ನಿಮಗೆ ಯಾವುದೇ ಹಾನಿಯಾಗುವುದಿಲ್ಲ. ನೀವು ಕೇವಲ ರಹಸ್ಯವಾಗಿ ಸತ್ಯನಿಷೇಧಿಗಳ ಡೇರೆಗಳಿಗೆ ಹೋಗಿ ಮತ್ತು ಯಾರಿಗೂ ಕಿರುಕುಳ ನೀಡಬೇಡಿ ಮತ್ತು ನಿಮ್ಮನ್ನು ನೋಡಲು ಬಿಡಬೇಡಿ.

ಹುದೈಫಾ(ರ) ಹೇಳುತ್ತಾರೆ: ನಾನು ಅಲ್ಲಿಂದ ಹೊರಟಿದಾಗ ನನ್ನ ದೇಹಕ್ಕೆ ಚಳಿ ಎಂಬ ಹೆಸರೂ ಇರಲಿಲ್ಲ. ಚಳಿಯಿಂದ ನಡುಗುತ್ತಿದ್ದ ಪರಿಸ್ಥಿತಿ ಇತ್ತು ಆದರೆ ಈಗ ಚಳಿಯ ಹೆಸರೂ ಕೂಡ ಇರಲಿಲ್ಲ ಬದಲಿಗೆ ನಾನು ಬಿಸಿನೀರಿನ ಸ್ನಾನ ಕೊಠಡಿಯ ಮೂಲಕ ಹಾದುಹೋದಂತೆ ಭಾಸವಾಯಿತು ಮತ್ತು ನನ್ನ ಗಾಬರಿ ಸಂಪೂರ್ಣವಾಗಿ ಹೋಗಿತ್ತು ಎಂದು ಹೇಳುತ್ತಾರೆ. ರಾತ್ರಿಯ ಕತ್ತಲೆ ಸಂಪೂರ್ಣವಾಗಿ ಆವರಿಸಿತ್ತು. ಮತ್ತು ನಾನು ಸಾಕಷ್ಟು ನಿರ್ಭಯವಾಗಿ ಆದರೆ ರಹಸ್ಯವಾಗಿ ಸತ್ಯನಿಷೇಧಿಗಳ "ಕ್ಯಾಂಪ್" ಅನ್ನು ಪ್ರವೇಶಿಸಿದೆ. ಆ ಸಮಯದಲ್ಲಿ ಅಬು ಸುಫ್ಯಾನ್ ಒಂದು ಸ್ಥಳದಲ್ಲಿ ನಿಂತು ಬೆಂಕಿಯಿಂದ ಶಾಖಪಡೆಯುತ್ತಿರುವುದನ್ನು ನಾನು ನೋಡಿದೆ. ನಾನು ಅವನನ್ನು ನೋಡಿದಾಗ, ನಾನು ನನ್ನ ಬಿಲ್ಲನ್ನು ನೇರಗೊಳಿಸಿ ನನ್ನ ಬಾಣವನ್ನು ಹೊಡೆಯಲು ಹೊರಟೆ, ಆದರೆ ತಕ್ಷಣ ನನಗೆ ಹಝ್ರತ್ ಪೈಗಂಬರ್(ಸ) ರ ಮಾರ್ಗದರ್ಶನವನ್ನು ನೆನಪಿಸಿಕೊಂಡೆ ಮತ್ತು ಬಾಣವನ್ನು ಹೊಡೆಯುವುದರಿಂದ ತಡೆದುಕೊಂಡೆ ಆ ಸಮಯಯದಲ್ಲಿ ನಾನು ಭಾಣ ಹೊಡೆಯುತ್ತಿದ್ದರೆ ಖಂಡಿತವಾಗಿಯು ಅಬು ಸುಫ್ಯಾನ್ ಉಳಿದಿರಲು ಸಾಧ್ಯವಿರಲಿಲ್ಲ. ಆ ಸಮಯದಲ್ಲಿ, ಅಬು ಸುಫ್ಯಾನ್ ತನ್ನ ಜನರನ್ನು ಹಿಂದಿರುಗಲು ಆದೇಶಿಸಿದನು ಮತ್ತು ನಂತರ ಅವನು ಒಂಟೆಯನ್ನು ನನ್ನ ಮುಂದೆಯೇ ಏರಿದನು, ಆದರೆ ಗಾಬರಿಯಿಂದ ಅವನು ತನ್ನ ಒಂಟೆಯ ಪಾದಗಳನ್ನು ತೆರೆಯಲು ಮರೆತಿದ್ದನ್ನು. ತದನಂತರ ನಾನು ಅಲ್ಲಿಂದ ಹಿಂತಿರುಗಿದೆ. ಅವರು ಹೇಳುತ್ತಾರೆ, "ನಾನು ನನ್ನ ಶಿಬಿರವನ್ನು ತಲುಪಿದಾಗ, ಹಝ್ರತ್ ಪೈಗಂಬರ್(ಸ)ರು ನಮಾಝ್ ನಿರ್ವಹಿಸುತ್ತಿದ್ದರು. ನಾನು ನೀವು(ಸ) ನಮಾಝುನ್ನು ಮುಗಿಸುವವರೆಗೂ ಕಾದು ಇಡೀ ಘಟನೆಯನ್ನು ನಿಮಗೆ ತಿಳಿಸಿದೆ, ಅದಕ್ಕಾಗಿ ಹಝ್ರತ್ ಪೈಗಂಬರ್(ಸ) ರು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸಿದರು ಮತ್ತು ಹೀಗೆ ಹೇಳಿದರು: ಇದು ನಮ್ಮ ಯಾವುದೇ ಪ್ರಯತ್ನದ ಫಲವಲ್ಲ. ಬದಲಾಗಿ ಕೇವಲ ಅಲ್ಲಾಹನ ಕೃಪೆಯ ಕಾರಣದಿಂದಾಗಿದೆ. ಅವನು ತನ್ನ ಶಕ್ತಿಯಿಂದ ಅಹ್‌ಝ್ಹಾಬ್‌ರನ್ನು ದಮನಿಸಿದನು. ಅನಂತರ ಸತ್ಯನಿಷೇಧಿಗಳು ಪರಾರಿಯಾದ ಸುದ್ದಿ ಮುಸ್ಲಿಮರ ನಡುವೆ ಹರಡಿತು. (ಸೀರ'ತ್ ಖಾತಮನ್ನಬಿಯೀನ್(ಸ), ಹಝ್ರತ್ ಸಾಹಿಬ್‌ಝಾದ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಎಂ.ಎ, ಪುಟ-594-595)

ಈ ಘಟನೆಯನ್ನು ಹಝ್ರತ್ ಮುಸ್ಲೆಹ್ ಮೌಊದ್(ರ) ರವರು ಈ ರೀತಿ ವಿವರಿಸಿದ್ದಾರೆ. "ರಾತ್ರಿಯ ಕೊನೆಯ ಹೊತ್ತಿನಲ್ಲಿ, ಸುಮಾರು ಇಪ್ಪತ್ತೈದು ಸಾವಿರ ಸತ್ಯನಿಷೇಧಿ ಸೈನಿಕರು ಬೀಡುಬಿಟ್ಟಿದ್ದ ಮೈದಾನವು ಕಾಡಿನಂತೆ ನಿರ್ಜನವಾಯಿತು. ಆ ಸಮಯದಲ್ಲಿ ಅಲ್ಲಾಹನು ಹಝ್ರತ್ ಪೈಗಂಬರ್(ಸ) ಅವರಿಗೆ ಇಲ್‌ಹಾಮ್ (ದೈವವಾಣಿ) ಮೂಲಕ ತಿಳಿಸಿದನು, ನಾವು ನಿಮ್ಮ ಶತ್ರುವನ್ನು ಓಡಿಸಿದ್ದೇವೆ." ಸರ್ವಶಕ್ತನಾದ ಅಲ್ಲಾಹನು ಹೇಳಿದ್ದರಿಂದ ಹಝ್ರತ್ ಪೈಗಂಬರ್(ಸ)ರು ಸಹಾಬಗಳಿಗೆ ನಿಮ್ಮಲ್ಲಿ ಯಾರಾದ್ದರು ಇದ್ದರೆ ಅವರು ಮುಂದೆ ಬನ್ನಿ ಎಂದು ಹೇಳಿದರು. "ಹಝ್ರತ್ ಪೈಗಂಬರ್(ಸ)ರು ಸತ್ಯವನ್ನು ಕಂಡುಹಿಡಿಯಲು ಯಾರನ್ನಾದರೂ ಕಳುಹಿಸಲು ಬಯಸಿದರು ಮತ್ತು ಅವರ(ಸ) ಸುತ್ತಲೂ ಕುಳಿತಿದ್ದ ಸಹಚರರನ್ನು ಕರೆದರು. ಅದು ಚಳಿಗಾಲವಾಗಿತ್ತು ಮತ್ತು ಮುಸ್ಲಿಮರಿಗೆ ಸಾಕಷ್ಟು ಬಟ್ಟೆಯೂ ಇರಲಿಲ್ಲ. ಚಳಿಯಿಂದಾಗಿ ನಾಲಿಗೆಯೂ ಹೆಪ್ಪುಗಟ್ಟುತ್ತಿತ್ತು. ಕೆಲವು ಸಹಾಬಿಗಳು ಹೇಳುತ್ತಾರೆ: ನಾವು ಹಝ್ರತ್ ಪೈಗಂಬರ್(ಸ)ರ ಧ್ವನಿಯನ್ನು ಆಲಿಸಿದ್ದೇವೆ ಮತ್ತು ಅದಕ್ಕೆ ನಾವು ಉತ್ತರಿಸಲು ಬಯಸಿದ್ದೇವೆ, ಆದರೆ ನಮಗೆ ಹೇಳಲು ಸಾಧ್ಯವಾಗಲಿಲ್ಲ. ಒಬ್ಬ ಹುಝೈಫ(ರ) ಮಾತ್ರ ಹೀಗೆ ಉತ್ತರಿಸಿದರು, ಯಾ ರಸೂಲಲ್ಲಾಹ್(ಸ)!! ಏನು ವಿಷಯ? ಇಲ್ಲಿ, ಹಝ್ರತ್ ಮುಸ್ಲೆಹ್ ಮೌಊದ್(ರ)ರು ಹುಝೂರ್(ಸ)ರು ಹಝ್ರತ್ ಹುಝೈಫಾ(ರ)ರನ್ನು ಕರೆದರು ಎಂದು ಹೇಳಲಿಲ್ಲ ಬದಲಿಗೆ ಹಝ್ರತ್ ಮುಸ್ಲೆಹ್ ಮೌಊದ್(ರ) ಹೇಳಿದರು, ಹುಝೂರ್(ಸ) ಹೇಳಿದರು, "ನಿನ್ನಲ್ಲ, ನನಗೆ ಇನ್ನೊಬ್ಬ ವ್ಯಕ್ತಿ ಬೇಕು." ಮತ್ತೆ ಹಝ್ರತ್ ಪೈಗಂಬರ್(ಸ)ರು ಹೇಳಿದರು: ಯಾರಾದರೂ ಇದ್ದಾರೆಯೇ? ಆದರೆ ಚಳಿಯ ತೀವ್ರತೆಯಿಂದಾಗಿ ಇನ್ನೂ ಎಚ್ಚರವಾಗಿದ್ದವರು ಸಹ ಅವರಿಗೆ ಉತ್ತರಿಸಲಾಗಲಿಲ್ಲ. ಆಗ ಹುಝೈಫಾ ಹೇಳಿದರು, ಯಾ ರಸೂಲುಲ್ಲಾಹ್(ಸ)! ನಾನು ಹಾಜರಿದ್ದೇನೆ. ಕೊನೆಗೆ ಹಝ್ರತ್ ಪೈಗಂಬರ್(ಸ)ರು ಹಝ್ರತ್ ಹುಝೈಫಾ(ರ)ರನ್ನು ಸರ್ವಶಕ್ತನಾದ ಅಲ್ಲಾಹನು 'ನಾವು ನಿಮ್ಮ ಶತ್ರುವನ್ನು ಓಡಿಸಿದ್ದೇವೆ' ಎಂದು ನನಗೆ ತಿಳಿಸಿದ್ದಾನೆ ಎಂದು ಕಳುಹಿಸಿದರು. ಹೋಗಿ ಶತ್ರುಗಳ ಸ್ಥಿತಿ ಏನಾಗಿದೆ ಎಂದು ನೋಡಿದಾಗ ಹುಝೈಫ(ರ) ಕಂದಕಕ್ಕೆ ಹೋಗಿ ನೋಡಿದಾಗ ಮೈದಾನವು ಸಂಪೂರ್ಣವಾಗಿ ಶತ್ರಗಳಿಂದ ಖಾಲಿಯಾಗಿದ್ದನ್ನು ಕಂಡ ಹಿಂದಿರುಗಿದರು ಮತ್ತು ಕಲಿಮಾ ಶಹಾದತ್ ಅನ್ನು ಪಠಿಸುತ್ತಾ ಹಝ್ರತ್ ಪೈಗಂಬರ್(ಸ)ರನ್ನು ದೃಢಪಡಿಸಿದನು ಮತ್ತು ಶತ್ರುಗಳು ಕ್ಷೇತ್ರವನ್ನು ಬಿಟ್ಟು ಓಡಿಹೋದರು ಎಂದು ಹೇಳಿದನು.

ಉಳಿದ ವಿವರಣೆ ಮುಂದುವರೆಯುವುದು ಇನ್‌ಶಾ ಅಲ್ಲಾಹ್.

ನಿಮಗೆ ಗೊತ್ತಿರುವಂತೆ ಲೋಕದ ಸ್ಥಿತಿ ದಿನೇ ದಿನೇ ಕೆಟ್ಟು ಹೋಗುತ್ತಿದೆ. ಲೋಕ ನಾಶದ ಕಡೆಗೆ ಹೋಗುತ್ತಿದೆ. ಅಮೇರಿಕ ಮತ್ತು ಪ್ರಬಲ ಶಕ್ತಿರಾಷ್ಟ್ರಗಳು ನ್ಯಾಯಪಾಲನೆ ಮಾಡುತ್ತಿಲ್ಲ. ಯುದ್ಧ ವಿಸ್ತಾರಗೊಳ್ಳುತ್ತಿದೆ. ಅಲ್ಲಾಹನು ಅಹ್ಮದಿಯರನ್ನು ಮತ್ತು ಮುಗ್ಧ ಜನರನ್ನು ಅದರ ಭಯಾನಕ ದುಷ್ಪರಿಣಾಮಗಳಿಂದ ರಕ್ಷಿಸಲಿ. ಅದಕ್ಕಾಗಿ ನಾವು ಅಲ್ಲಾಹನೊಂದಿಗೆ ಸಂಬಂಧವನ್ನು ವರ್ಧಿಸಬೇಕು ಮತ್ತು ಪ್ರಾರ್ಥನೆಗಳ ಕಡೆಗೆ ಬಹಳಷ್ಟು ಗಮನಹರಿಸಬೇಕು. ಈ ಬಗ್ಗೆ ಪ್ರತಿಯೊಬ್ಬ ಅಹ್ಮದಿ ಶ್ರದ್ಧೆವಹಿಸಬೇಕು.

ಪಾಕಿಸ್ತಾನದಲ್ಲೂ ಅಹ್ಮದಿಯರ ಸ್ಥಿತಿ ಸಾಕಷ್ಟು ಕೆಟ್ಟು ಹೋಗುತ್ತಿದೆ. ಅವರಿಗಾಗಿಯೂ ದುಆ ಮಾಡಿರಿ. ಬಾಂಗ್ಲಾದೇಶದ ಅಹ್ಮದಿಯರ ಸ್ಥಿತಿಗಾಗಿಯೂ ಪ್ರಾರ್ಥಿಸಿರಿ. ಅವರ ಮೇಲೂ ಬಹಳಷ್ಟು ಕಾಠಿಣ್ಯಗಳು ನಡೆಯುತ್ತಿವೆ. ಅಲ್ಲಾಹನು ಎಲ್ಲರ ಮೇಲೂ ಕರುಣೆ ಮತ್ತು ಕೃಪೆದೋರಲಿ.

**(ಅಲ್-ಫಝ್ಲ್ ಇಂಟರ್‌ನ್ಯಾಶನಲ್, ಅಕ್ಟೋಬರ್ 25, 2024, ಪುಟ 2-6)**

-------------*****-------------

## ಜಲ್ಸ ಸಾಲಾನ ಖಾದಿಯಾನ್

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ಈ ಜಲ್ಸದೊಂದಿಗೆ ಅನೇಕ ಅನುಗ್ರಹಗಳು ಅನಿವಾರ್ಯವಾಗಿ ಸೇರಿಕೊಂಡಿರುವುದರಿಂದ ದಾರಿ ಖರ್ಚಿಗೆ ಸಾಮರ್ಥ್ಯವಿರುವ ಪ್ರತಿಯೊಬ್ಬನು ಈ ಜಲ್ಸಕ್ಕೆ ಆಗಮಿಸಬೇಕು. ಚಳಿಗಾಲಕ್ಕೆ ಅವಶ್ಯಕವಾದ ಹಾಸುವ ಮತ್ತು ಹೊದಿಕೆ ಬಟ್ಟೆಗಳನ್ನು ಆವಶ್ಯಕವಾದಷ್ಟು ತರಬೇಕು. ಅಲ್ಲಾಹನ ಮತ್ತು ಅವನ ರಸೂಲರ ಮಾರ್ಗದಲ್ಲಿ ಚಿಕ್ಕಪುಟ್ಟ ಅಡ್ಡಿ ಆತಂಕಗಳನ್ನು ನಿರ್ಲಕ್ಷಿಸಬೇಕು. ಅಲ್ಲಾಹನು ನಿಷ್ಠಾವಂತನಿಗೆ ಪ್ರತಿಯೊಂದು ಹೆಜ್ಜೆಯಲ್ಲಿಯೂ ಅನುಗ್ರಹ ನೀಡುತ್ತಾನೆ. ಅವನ ಮಾರ್ಗದಲ್ಲಿ ಪಡುವ ಕಷ್ಟಗಳನ್ನು ವ್ಯರ್ಥಗೊಳಿಸುವುದಿಲ್ಲ. ನಾನು ಪುನರಾವರ್ತಿಸಿ ಬರೆಯುತ್ತೇನೆ ಈ ಜಲ್ಸವನ್ನು ಮಾನವರ ಸಾಮಾನ್ಯ ಜಲ್ಸದ ಹಾಗೆಂದು ಯೋಚಿಸಬೇಡಿರಿ. ಇದು ಸತ್ಯಕ್ಕೆ ಬೆಂಬಲ ನೀಡುವ ಮತ್ತು ಇಸ್ಲಾಮಿನ ಪ್ರಚಾರ ಮಾಡುವ ಅಸ್ತಿಭಾರವನ್ನು ಹೊಂದಿದೆ. ಈ ಜಮಾಅತಿನ ಅಸ್ತಿಭಾರವನ್ನು ಅಲ್ಲಾಹನು ತನ್ನ ಕೈಯಿಂದ ಹಾಕಿದ್ದಾನೆ. ಇದಕ್ಕೋಸ್ಕರ ಅಲ್ಲಾಹನು ಸಮುದಾಯಗಳನ್ನು ಸಿದ್ಧಪಡಿಸಿಟ್ಟಿದ್ದಾನೆ. ಅವರು ಬೇಗನೆ ಇದರಲ್ಲಿ ಬಂದು ಸೇರುವರು. ಯಾಕೆಂದರೆ ಇದು ಸರ್ವಶಕ್ತನಾದವನ ಕೆಲಸವಾಗಿದೆ. ಅವನಿಗೆ ಅಸಾಧ್ಯವಾದುದು ಏನೂ ಇಲ್ಲ."

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ: "ಅಲ್ಲಾಹನಿಗೋಸ್ಕರ ಈ ಜಲ್ಸದಲ್ಲಿ ಭಾಗವಹಿಸಲು ಪ್ರಯಾಣ ಮಾಡುವ ಪ್ರತಿಯೊಬ್ಬನ ಜೊತೆಗೆ ಅಲ್ಲಾಹನು ಜೊತೆಗಾರನಾಗಿರಲಿ. ಅವನಿಗೆ ಬೃಹತ್ತಾದ ಪ್ರತಿಫಲ ನೀಡಲಿ. ಅವರೆಲ್ಲರಿಗೆ ಕಾರುಣ್ಯದೋರಲಿ. ಅವರ ಕಷ್ಟಗಳನ್ನೂ ಆತಂಕಭರಿತ ಸ್ಥಿತಿಯನ್ನೂ ನಿವಾರಿಸಿ ಅವರಿಗೆ ಸೌಲಭ್ಯ ನೀಡುವಂತಾಗಲಿ. ಅವರ ಚಿಂತೆಗಳನ್ನೂ ದುಃಖಗಳನ್ನೂ ದೂರ ಸರಿಸಲಿ. ಅವರಿಗೆ ಪ್ರತಿಯೊಂದು ಕಷ್ಟದಿಂದ ಮುಕ್ತಿಯನ್ನು ದಯಪಾಲಿಸಲಿ. ಅವರ ಇಚ್ಛೆಗಳ ಮಾರ್ಗಗಳನ್ನು ಅವರಿಗೆ ತೆರೆದುಕೊಡಲಿ. ಆಖಿರತ್‌ನಲ್ಲಿ ಅಲ್ಲಾಹನು ಅವರನ್ನು ತಾನು ಅನುಗ್ರಹ ಮತ್ತು ಕಾರುಣ್ಯ ನೀಡಿದ ತನ್ನ ದಾಸರೊಂದಿಗೆ ಎದ್ದೇಳಿಸಲಿ. ಅವರ ಪ್ರಯಾಣದ ಅಂತ್ಯದ ವರೆಗೂ ಅವರ ಬದಲು ಅವರ ಪ್ರತಿನಿಧಿಯಾಗಿರಲಿ. ಓ ಅಲ್ಲಾಹ್, ಕೀರ್ತಿಶಾಲಿಯೂ ವರದಾನ ನೀಡುವವನೂ ಕಾರುಣ್ಯಮಯನೂ ಕಷ್ಟ ಪರಿಹರಿಸುವವನೂ ಆಗಿರುವ ನೀನು ಈ ಎಲ್ಲ ಪ್ರಾರ್ಥನೆಗಳನ್ನೂ ಅಂಗೀಕರಿಸು. ನಮ್ಮ ವಿರೋಧಿಗಳ ವಿರುದ್ಧ ಪ್ರಕಾಶಮಾನವಾದ ದೃಷ್ಟಾಂತಗಳ ಮೂಲಕ ನಮಗೆ ಜಯವನ್ನು ನೀಡು. ಎಲ್ಲಾ ಶಕ್ತಿಸಾಮರ್ಥ್ಯಗಳು ನಿನ್ನಲ್ಲಿ ಮಾತ್ರ ಇವೆ" – ಆಮೀನ್ ಸುಮ್ಮ ಆಮೀನ್. **(ಮಜ್‌ಮೂಅ ಇಶ್ತಿಹಾರಾತ್ ಸಂಪುಟ-1 ಪುಟ 341-342, ಇಶ್ತಿಹಾರ್ 1892 ಡಿಸೆಂಬರ್ ದಿನಾಂಕ 7)**

**MUSLIM TELEVISION AHMADIYYA INTERNATIONAL**
**www.mta.tv**

## ಸದರ್ ಅಂಜುಮನ್ ಅಹ್ಮದಿಯಾ ಖಾದಿಯಾನ್‌ನ ಕಚ್ಚೇರಿಗಳಲ್ಲಿ ಸೇವೆಸಲ್ಲಿಸಲು ಬಯಸುವವರು ಗಮನಹರಿಸಿರಿ

**ಎರಡನೇ ದರ್ಜೆಯ ಪೋಸ್ಟ್‌ಗಾಗಿ ಷರತ್ತುಗಳು**

(1) ಅಭ್ಯರ್ಥಿಯ ವಯಸ್ಸು 25 ವರ್ಷಗಳಿಗಿಂತ ಹೆಚ್ಚು ಮತ್ತು 18 ವರ್ಷಗಳಿಗಿಂತ ಕಡಿಮೆಯಿರಬಾರದು (2) ಅಭ್ಯರ್ಥಿಯು 45% ಅಂಕಗಳೊಂದಿಗೆ ಕನಿಷ್ಠ 10+2 ರ ಶೈಕ್ಷಣಿಕ ಅರ್ಹತೆಯನ್ನು ಹೊಂದಿರಬೇಕು (3) ಅಭ್ಯರ್ಥಿಯು ಉರ್ದು/ಇಂಗ್ಲಿಷ್ ಕಮ್ಪೋಝಿಂಗ್ ತಿಳಿದಿರಬೇಕು ಮತ್ತು ವೇಗದ ಮಿತಿ ಪ್ರತಿ ನಿಮಿಷಕ್ಕೆ 25 ಪದಗಳಾಗಿರಬೇಕು (4) ಈ ಪ್ರಕಟಣೆಯ ನಂತರ 2 ತಿಂಗಳೊಳಗೆ ಸ್ವೀಕರಿಸಿದ ಅರ್ಜಿಗಳನ್ನು ಪರಿಗಣಿಸಲಾಗುತ್ತದೆ.

ಎರಡನೇ ದರ್ಜೆಯವರಿಗೆ ಪರಿಕ್ಷೆ ಕೆಳಕಂಡಂತೆ ಪಠ್ಯಕ್ರಮದಂತೆ ಇರುತ್ತದೆ. ಪರಿಕ್ಷೆಯ ಪ್ರತಿ ಭಾಗದಲ್ಲೂ ಉತ್ತೀರ್ಣ ಆಗುವುದು ಕಡ್ಡಾಯವಾಗಿರುತ್ತದೆ.

**ಭಾಗ–1:** * ಪವಿತ್ರ ಖುರ್‌ಆನ್ ನಾಝಿರ ಪೂರ್ಣ, ಅನುವಾದದೊಂದಿಗೆ ಮೊದಲ ಭಾಗ * ಚಾಲೀಸ್ ಜವಾಹಿರ್ ಪಾರೆ. ಅರ್ಕಾನೆ ಇಸ್ಲಾಮ್, ಸಂಪೂರ್ಣ ನಮಾಝ್ ಅನುವಾದದೊಂದಿಗೆ. **(30 ಸಂಖ್ಯೆಗಳು)**

**ಭಾಗ–2:** ಕೆಶ್ತಿ ನೂಹ್, ಬರಕಾತುದ್ದುಆ, ದೀನೀ ಮಾಲೂಮಾತ್ * ಪ್ರಬಂಧ ಅಹ್ಮದೀಯ ಜಮಾತ್‌ನ ನಂಬಿಕೆಗಳು * ನಝುಮ್ ದುರ್ರೆ ಸಮೀನ್ (ಶಾನ್ ಇಸ್ಲಾಂ). **(20 ಅಂಕಗಳು)**

**ಭಾಗ–3:** ಇಂಗ್ಲಿಷ್ ಪದವಿ ಪೂರ್ವ ಶಿಕ್ಷಣದ (10+2) ಮಾನದಂಡದ ಪ್ರಕಾರ. **(20 ಅಂಕಗಳು)**

**ಭಾಗ–4:** ಮೆಟ್ರಿಕ್ ಮಾನದಂಡದ ಪ್ರಕಾರ ಅಂಕಗಣಿತ (ಆಫೀಸ್ ಇಂಪ್ರೆಸ್ಟ್‌ಗೆ ಸಂಬಂಧಿಸಿದ ಪ್ರಶ್ನೆಗಳು). **(20 ಅಂಕಗಳು)**

**ಭಾಗ–5:** ಸಾಮಾನ್ಯಜ್ಞಾನ (ಜಿ.ಕೆ) **(10 ಅಂಕಗಳು)**

(6) ಲಿಖಿತ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳನ್ನು ಮತ್ರ ಸಂದರ್ಶಿಸಲಾಗುವುದು (7) ಲಿಖಿತ ಪರೀಕ್ಷೆ, ಕಂಪ್ಯೂಟರ್ ಪರೀಕ್ಷೆ ಮತ್ತು ಸಂದರ್ಶನದಲ್ಲಿ ಯಶಸ್ಸಿನ ಸಂದರ್ಭದಲ್ಲಿ, ಅಭ್ಯರ್ಥಿಯು ನೂರ್ ಆಸ್ಪತ್ರೆ ಖಾದಿಯನ್‌ನಲ್ಲಿ ವೈದ್ಯಕೀಯ ತಪಾಸಣೆಗೆ ಒಳಗಾಗಬೇಕಾಗುತ್ತದೆ ಮತ್ತು ನೂರ್ ಆಸ್ಪತ್ರೆ ಸಮಿತಿಯ ವರದಿಯ ಪ್ರಕಾರ ಯಾರು ಆರೋಗ್ರವಂತಿರುತ್ತಾರೊ ಆ ಅಭ್ಯರ್ಥಿಗಳು ಮಾತ್ರ ಸೇವೆಸಲ್ಲಿಸಲು ಅರ್ಹರಾಗಿರುತ್ತಾರೆ. (8) ಆಯ್ಕೆಯ ಸಂದರ್ಭದಲ್ಲಿ, ಅಭ್ಯರ್ಥಿಯು ಖಾದಿಯಾನ್‌ನಲ್ಲಿ ತನ್ನ ಸ್ವಂತ ವಸತಿಯನ್ನು ವ್ಯವಸ್ಥೆಗೊಳಿಸಬೇಕಾಗುತ್ತದೆ, ವಸತಿಗೆ ಸಂಬಂಧಿಸಿದಂತೆ ನಂತರ ಸ್ವೀಕರಿಸಿದ ಅರ್ಜಿಯ ಮೇಲೆ ಯಾವುದೇ ಕ್ರಮವನ್ನು ತೆಗೆದುಕೊಳ್ಳಲಾಗುವುದಿಲ್ಲ. (9) ಖದಿಯಾನ್ ಪ್ರಯಾಣದ ವೆಚ್ಚಗಳು ಅಭ್ಯರ್ಥಿಯ ಸ್ವಂತ ಜವಾಬ್ದಾರಿಯಗಿರುತ್ತದೆ.

**(ಗಮನಿಸಿ: ಲಿಖಿತ ಪರೀಕ್ಷೆ ಮತ್ತು ಸಂದರ್ಶನದ ದಿನಾಂಕವನ್ನು ಅಭ್ಯರ್ಥಿಗಳಿಗೆ ನಂತರ ತಿಳಿಸಲಾಗುವುದು)**

***ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:***

ನಝಾರತ್ ದೀವಾನ್ ಸ್ರ ಅಂಜುಮನ್ ಅಹ್ಮದಿಯಾ
ಖಾದಿಯಾನ್–143516, ಮೊಬೈಲ್: 09682627592,
09682587713,
ಕಛೇರಿ: 01872–501130, ಇ–ಮೇಲ್: diwan@qadian.in

**ಸೂಚನೆ::** ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ R ° Ã¥ $ **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಪ್ರತಿ ಶುಕ್ರವಾರ ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **ಖುತ್‌ಬ ಜುಮುಅ**ವನ್ನು ನೀಡುತ್ತಾರೆ. ಅದರ ನೇರ ಪ್ರಸಾರ MTA ಮುಖಾಂತರ ವೀಕ್ಷಿಸಲು ವಿನಂತಿಸಿಕೊಳ್ಳುತ್ತೇವೆ

**MUSLIM TELEVISION AHMADIYYA INTERNATIONAL**
**www.mta.tv**

**"ಮೇಲಿನ ಕೈ ಕೆಳಗಿನ ಕೈಗಿಂತ ಉತ್ತಮವಾಗಿದೆ. (ಎಂದರೆ ಧಾನಧರ್ಮ ಕೊಡುವವನು ಅದನ್ನು ಪಡೆದುಕೊಳ್ಳುವವನಿಗಿಂತ ಉತ್ತಮವಾಗಿದ್ದಾನೆ)"**
(ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್)

**ದುಆವಿನ ಆಕಾಂಕ್ಷಿ:**
**M.B. Nasir Ahmed & Family, Bengaluru, Karnataka**

## ಸದರ್ ಅಂಜುಮನ್ ಅಹ್ಮದಿಯಾ ಖಾದಿಯಾನ್‌ನ ಡ್ರೈವರ್ ಹುದ್ದೆಗೆ ಘೋಷಣೆ

**ಷರತ್ತುಗಳು**

(1) ಅಭ್ಯರ್ಥಿಯ ವಯಸ್ಸು 18 ವರ್ಷಕ್ಕಿಂತ ಹೆಚ್ಚು ಮತ್ತು 40 ವರ್ಷಕ್ಕಿಂತ ಕಡಿಮೆ ಇರಬೇಕು. (2) ಅಭ್ಯರ್ಥಿಯು ಕನಿಷ್ಠ 10ನೇ ತರಗತಿ ತೇರ್ಗಡೆ ಹೊಂದಿರಬೇಕು. (3) ಅಭ್ಯರ್ಥಿಯು ಮಾನ್ಯವಾದ ನಾಲ್ಕು ಚಕ್ರದ ಚಾಲನಾ ಪರವಾನಗಿಯನ್ನು ಹೊಂದಿರಬೇಕು. (4) ಅಭ್ಯರ್ಥಿಯು ಸರ್ಕಾರಿ ಅಥವಾ ಖಾಸಗಿ ಸಂಸ್ಥೆಯಲ್ಲಿ ಕನಿಷ್ಠ 2 ವರ್ಷಗಳ ಚಾಲನಾ ಅನುಭವವನ್ನು ಹೊಂದಿರುವುದು ಅವಶ್ಯಕ. ಅದೇ ರೀತಿ ಅಭ್ಯರ್ಥಿಯು ತನ್ನ ಅರ್ಜಿಯೊಂದಿಗೆ ಅಭ್ಯರ್ಥಿಯು ಅನುಭವವನ್ನು ಪಡೆದಿರುವ ಸಂಸ್ಥೆಯ ಅನುಭವ ಪ್ರಮಾಣಪತ್ರವನ್ನು (Experience Certificate) ಸಲ್ಲಿಸುವುದು ಸಹ ಕಡ್ಡಾಯವಾಗಿದೆ. (5) ಅಭ್ಯರ್ಥಿಯು ತನ್ನ ಜನ್ಮ ಪ್ರಮಾಣಪತ್ರವನ್ನು (Birth Certificate) ಸಲ್ಲಿಸುವುದು ಅವಶ್ಯಕ. (6) ಅಭ್ಯರ್ಥಿಯು ಲಿಖಿತ ಪರೀಕ್ಷೆ ಮತ್ತು ಸಂದರ್ಶನದಲ್ಲಿ ಉತ್ತೀರ್ಣ ಆಗಬೇಕು. (7) ಲಿಖಿತ ಪರೀಕ್ಷೆ ಮತ್ತು ಸಂದರ್ಶನದಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಚಾಲನಾ ಪರೀಕ್ಷೆಯನ್ನು (Driving Test) ಸಹ ನೀಡಲಾಗುತ್ತದೆ. (8) ಅಭ್ಯರ್ಥಿಯು ನೂರ್ ಆಸ್ಪತ್ರೆ ಖಾಜುಥಿಂನ್‌ನಿಂದ ವೈದ್ಯಕೀಯ ಫಿಟ್‌ನೆಸ್ ಪ್ರಮಾಣಪತ್ರದ ಪ್ರಕಾರ ಫಿಟ್ ಮತ್ತು ಆರೋಗ್ಯವಂತರಾಗಿರಬೇಕು. (9) ನೇಮಕಾತಿಯ ನಂತರ ಅಭ್ಯರ್ಥಿ ಚಾಲಕನಿಗೆ ಗ್ರೇಡ್–2 ಗೆ ಸಮಾನವಾದ ಭತ್ಯೆ ಮತ್ತು ಇತರ ಸೌಲಭ್ಯಗಳನ್ನು ನೀಡಲಾಗುವುದು. (10) ಆಯ್ಕೆಯ ಸಂದರ್ಭದಲ್ಲಿ, ಅಭ್ಯರ್ಥಿಗಳು ಮೊದಲ ಐದು ವರ್ಷಗಳ ಕಾಲ ಖಾದಿಯಾನ್‌ನಲ್ಲಿ ತಮ್ಮ ಸ್ವಂತ ವಸತಿಯ ವ್ಯವಸ್ಥೆ ಮಾಡಿಕೊಳ್ಳಬೇಕಾಗುತ್ತದೆ. (11) ಖಾದಿಯಾನ್ ಪ್ರಯಾಣದ ವೆಚ್ಚಗಳು ಅಭ್ಯರ್ಥಿಯ ಸ್ವಂತ ಜವಾಬ್ದಾರಿಯಗಿರುತ್ತದೆ.

**ಗಮನಿಸಿ: ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷೆ, ಸಂದರ್ಶನ ಮತ್ತು ಡ್ರೈವಿಂಗ್ ಪರೀಕ್ಷೆಯ ದಿನಾಂಕವನ್ನು ನಂತರ ತಿಳಿಸಲಾಗುವುದು.**

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:**

ನಝಾರತ್ ದೀವಾನ್ ಸದರ್ ಅಂಜುಮನ್ ಅಹ್ಮದಿಯಾ
ಖಾದಿಯಾನ್–143516
ಮೊಬೈಲ್: 09888232530, 09682627592,
ಕಛೇರಿ: 01872–501130
ಇ–ಮೇಲ್: diwan@qadian.in

## ವಿವಾಹ ಪ್ರಚಾರಪಡಿಸಲು ದಫ್ ಉಪಯೋಗಿಸಬಹುದು ಹೊರತು ಡೋಲು ಬಾರಿಸುತ್ತಾ ಕುಣಿಯುವುದು ನಿಷಿದ್ಧವಾಗಿದೆ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಕೆಟ್ಟ ವಸ್ತುಗಳು ಹರಾಮ್ ಆಗಿದೆ ಮತ್ತು ಶುದ್ಧ ವಸ್ತುಗಳು ಹಲಾಲ್ ಆಗಿದೆ. ಅಲ್ಲಾಹನು ಯಾವುದೇ ಶುದ್ಧ ವಸ್ತುಗಳನ್ನು ನಿಷಿದ್ಧ (ಹರಾಮ್) ಗೊಳಿಸುವುದಿಲ್ಲ. ಬದಲು ಎಲ್ಲ ಶುದ್ಧ ವಸ್ತುಗಳು ಹಲಾಲ್ (ಧರ್ಮಬದ್ಧ) ಎನ್ನುತ್ತದೆ. ಆದರೆ ಶುದ್ಧ ವಸ್ತುಗಳೊಂದಿಗೆ ಅಶುದ್ಧ ವಸ್ತುಗಳನ್ನು ಬೆರಕೆ ಮಾಡಿದರೆ ಅದು ನಿಷಿದ್ಧವಾಗುತ್ತದೆ, ಈಗ ನೋಡಿ ವಿವಾಹವನ್ನು ಪ್ರಚಾರಪಡಿಸಲು ದಫ್ ಬಾರಿಸುವುದನ್ನು ಧರ್ಮಸಮ್ಮತವೆಂದಿದೆ. ಆದರೆ ಅದರಲ್ಲಿ ಡೋಲು ಬಾರಿಸುತ್ತಾ ಕುಣಿಯುವುದು ಇತ್ಯಾದಿ ಸೇರಿಸುವುದನ್ನು ನಿಷಿದ್ಧಗೊಳಿಸಲಾಗಿದೆ. ಆದರೆ ನಬಿ ಕರೀಂ ಸಲ್ಲಲ್ಲಾಹು ಅಲೈಹಿವಸಲ್ಲಮರ ರೀತಿಯನ್ನು ಅನುಸರಿಸಿದರೆ ಯಾವುದೂ ನಿಷಿದ್ಧವಲ್ಲ.

**(ಮಲ್‌ಫೂಝಾತ್, ಸಂಪುಟ–5, ಪುಟ–354, ಮುದ್ರಣ ಖಾದಿಯಾನ್ 2003)**

**"ಯಾರು ಜನರಿಗೆ ಕೃತಜ್ಞತೆ ಸಲ್ಲಿಸುವುದಿಲ್ಲವೋ ಅವನು ಅಲ್ಲಾಹನಿಗೂ ಕೃತಜ್ಞತೆ ಸಲ್ಲಿಸುವುದಿಲ್ಲ."**
(ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್)

**ದುಆವಿನ ಆಕಾಂಕ್ಷಿ:**
**Mubarak Ahmed Naseem & Family, Shimoga, Karnataka**

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadr.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613
Weekly **BADAR** Qadian
Distt: Gurdaspur (Pb.) INDIA Qadian - 143516
Postal Reg. No: 3000039689/2023-25 Vol No.05, Thursday, 14 November 2024, Issue No. 46

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

# ಸೈಯಿದುನಾ ಹಝ್ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಅ)ರವರ ಜರ್ಮನಿಯ ಪ್ರವಾಸ ಆಗಸ್ಟ್, ಸೆಪ್ಟೆಂಬರ್ 2023

*(ಬದರ್ ಸಂಚಿಕೆ-45ರ ಉಳಿದ ಭಾಗ ಮುಂದುವರಿಸಲಾಗಿದೆ)*

**ಒಂದನೇ ಸೆಪ್ಟೆಂಬರ್ ಶುಕ್ರವಾರ**

ಹುಝೂರ್ ಅನ್ವರ್(ಅತಬಅ) ಮುಂಜಾನೆ 5:40 ಗಂಟೆಗೆ ಪುರುಷರ ಜಲ್ಸ ಸ್ಥಳದಲ್ಲಿ ಆಗಮಿಸಿ ಫಜರ್ ನಮಾಝ್ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ಹುಝೂರ್ ಅನ್ವರ್(ಅತಬಅ) ತಮ್ಮ ವಸತಿಯತ್ತ ತೆರಳಿದರು. ಮುಂಜಾನೆ ಹುಝೂರ್ ಅನ್ವರ್(ಅತಬಅ) ಕಚೇರಿ ಕಾರ್ಯಗಳಲ್ಲಿ ತೊಡಗಿಕೊಂಡಿದ್ದರು.

ಇಂದು ಅಲ್ಲಾಹನ ಅನುಗ್ರಹದಿಂದ ಅಹ್ಮದಿಯಾ ಜಮಾಅತ್ ಜರ್ಮನಿಯ 47ನೇ ವಾರ್ಷಿಕ ಸಮ್ಮೇಳನದ ಪ್ರಾರಂಭ ಆಗಬೇಕಾಗಿತ್ತು. ಈ ಸಮ್ಮೇಳನವು ಜರ್ಮನಿಯ ಒಂದು ಶತನಕ ಪೂರ್ಣಗೊಳಿಸುವ ಸಮ್ಮೇಳನವಾಗಿದ್ದರಿಂದ, ಅದೊಂದು ಐತಿಹಾಸಿಕ ಸಮ್ಮೇಳನವಾಗಿತ್ತು ಮತ್ತು ಅದಕ್ಕೆ ಇನ್ನಷ್ಟು ಪ್ರಾಮುಖ್ಯತೆ ದೊರಕಿತ್ತು.

**ಧ್ವಜಾರೋಹಣ ಮತ್ತು ಜುಮುಅ ಖುತ್‌ಬದೊಂದಿಗೆ ಜಲ್ಸ ಸಾಲಾನ ಜರ್ಮನಿಯ ಪ್ರಾರಂಭ:-**

ಕಾರ್ಯಕ್ರಮದನ್ವಯ ಮಧ್ಯಾಹ್ನ 1:55 ಗಂಟೆಗೆ ಹುಝೂರ್ ಅನ್ವರ್(ಅತಬಅ) ಧ್ವಜಾರೋಹನ ನೆರವೇರಿಸಲು ಜಲ್ಸ ಸ್ಥಳದ ವಿವಿಧ ಸಭಾಂಗಣಗಳ ನಡುವೆ ಇರುವ ಮುಕ್ತ ಮೈದಾನದಲ್ಲಿ ಆಗಮಿಸಿದರು.

ಹುಝೂರ್ ಅನ್ವರ್(ಅತಬಅ) ಅಹ್ಮದಿಅತ್‌ನ ಧ್ವಜ ಹಾರೈಸಿದರು. ಅಮೀರ್ ಸಾಹಿಬ್ ಜರ್ಮನಿ, ಜರ್ಮನಿಯ ರಾಷ್ಟ್ರೀಯ ಧ್ವಜ ಆರೋಹಣ ಮಾಡಿದರು, ತದನಂತರ ಹುಝೂರ್ ಅನ್ವರ್(ಅತಬಅ) ದುಆ ಮಾಡಿಸಿದರು.

MTA International ನ ಇಲ್ಲಿಯ ಸ್ಥಳದಿಂದ ನೇರ ಪ್ರಸಾರಗಳು ಮುಂಜಾನೆಯಿಂದಲೇ ಪ್ರಾರಂಭಿಸಲಾಗಿತ್ತು. ಧ್ವಜಾರೋಹನದ ಈ ಸಮಾರಂಭವನ್ನು ಸಹ ಲೋಕದಾದ್ಯಂತ ನೇರವಾಗಿ ಮಾಡಲಾಯಿತು.

ಅನಂತರ ಹುಝೂರ್ ಅನ್ವರ್(ಅತಬಅ) ಪುರುಷರ ಜಲ್ಸ ಸ್ಥಳಕ್ಕೆ ಆಗಮಿಸಿದರು ಮತ್ತು ಜುಮುಅ ಖುತುಬ ಪ್ರಾರಂಭಿಸಿದರು. ಅದರೊಂದಿಗೆಯೇ ಜಲ್ಸ ಸಾಲಾನ ಉದ್ಘಾಟಿಸಲಾಯಿತು.

ಜುಮುಅ ಖುತುಬ ಪುರುಷರ ಜಲ್ಸ ಸ್ಥಳದಲ್ಲಿ ಈ ಕೆಳಗೆ ನಮೂದಿಸಿದ ಭಾಷೆಗಳಲ್ಲಿ ಅನುವಾದಿಸುವ ವ್ಯವಸ್ಥೆ ಮಾಡಲಾಗಿತ್ತು. ಜರ್ಮನ್, ಇಂಗ್ಲೀಷ್, ಅರಬಿ, ಫ್ರಾನ್ಸಿಸ್, ಬೋಸ್‌ನಿಯನ್, ಬಂಗಾಳಿ, ತುರ್‌ಕಿಶ್, ರಷ್ಯಯನ್, ಬಲ್‌ಗ್ಹಾರಿಯನ್, ಅಲ್‌ಬಾನಿಯನ್, ಸ್ಪಾನಿಷ್.

ಲಜ್ನ (ಮಹಿಳಾ) ಜಲ್ಸ ಸ್ಥಳದಲ್ಲಿ ವೆಬ್ ಸ್ಟ್ರೀಮ್ ಮೂಲಕ ಎಲ್ಲಾ ಭಾಷೆಗಳಲ್ಲಿ ಅನುವಾದದ ವ್ಯವಸ್ಥೆ ಮಾಡಲಾಗಿತ್ತು. ಅಲ್ಲದೇ ಪುರುಷರ ಜಲ್ಸ ಸ್ಥಳದಲ್ಲೂ ರೇಡಿಯೋ ಮತ್ತು ವೆಬ್‌ಸ್ಟ್ರೀಮ್ ಮೂಲಕ ಎಲ್ಲಾ ಭಾಷೆಗಳಲ್ಲಿ ಅನುವಾದದ ವ್ಯವಸ್ಥೆ ಮಾಡಲಾಗಿತ್ತು.

MTA ಮೂಲಕ ಇಲ್ಲಿಂದ ಒಂಭತ್ತು ಭಾಷೆಗಳಲ್ಲಿ ಇಂಗ್ಲೀಷ್, ಅರಬಿ, ಫ್ರೆಂಚ್, ಬಾಂಗ್ಲಾ, ಜರ್ಮನ್, ಇಂಡೋನೇಷಿಯನ್, ರಷಿಯನ್, ಸವಾಹೋಲಿ ಮತ್ತು ಸ್ಪಾನಿಷ್‌ನಲ್ಲಿ ಖುತುಬ ಜುಮುಅ ನೇರವಾಗಿ ಅನುವಾದವಾಗುವ ವ್ಯವಸ್ಥೆ ಮಾಡಲಾಗಿತ್ತು. ಅಲ್ಲದೇ ಯೋರ್‌ನಾ, ಹಾವುಸ್, ಕಟಕ್, ತಮಿಳು, ಮಲಯಾಳಂ ನಲ್ಲೂ ನೇರವಾಗಿ ಅನುವಾದದ ವ್ಯವಸ್ಥೆ ಮಾಡಲಾಗಿತ್ತು.

2 ಗಂಟೆ 10 ನಿಮಿಷಕ್ಕೆ ಹುಝೂರ್ ಅನ್ವರ್(ಅತಬಅ) ಜುಮುಅ ಖುತುಬ ಪ್ರಾರಂಭಿಸಿದರು. (ಜುಮುಅ ಖುತುಬದ ಸಂಪೂರ್ಣ ಲಿಖಿತ ಖುತುಬ ದಿನಾಂಕ 21 ಸೆಪ್ಟೆಂಬರ್ 2023 ರ ಸಂಚಿಕೆ ಸಂಖ್ಯೆ: 38 ರಲ್ಲಿ ಪ್ರಸಾರಗೊಂಡಿರುತ್ತದೆ. ಹುಝೂರ್ ಅನ್ವರ್(ಅತಬಅ) ಅವರ ಈ ಖುತುಬ ಜುಮುಅ 3 ಗಂಟೆ 13 ನಿಮಿಷದವರೆಗೆ ಜಾರಿಯಲ್ಲಿತ್ತು.

ಖುತುಬ ಜುಮುಅದ ನಂತರ ಹುಝೂರ್ ಅನ್ವರ್(ಅತಬಅ) ಜುಮುಅ ನಮಾಝ್‌ದೊಂದಿಗೆ ಅಸರ್ ನಮಾಝ್ ಜಮಾಗೊಳಿಸಿ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ಹುಝೂರ್ ಅನ್ವರ್(ಅತಬಅ) ತನ್ನ ವಸತಿ ಕಡೆ ಬರಬರುತ್ತಾ ರಸ್ತೆಯಲ್ಲಿ Humanity First Exhibition ನಲ್ಲಿ ಆಗಮಿಸಿದರು.

ಹುಝೂರ್ ಅನ್ವರ್(ಅತಬಅ) ಆ ಕಲುಷಿತ ನೀರಿನ ಬಕೆಟ್ ಬಗ್ಗೆ ಪ್ರಸ್ತಾಪಿಸಿದರು. ಆ ಬಗ್ಗೆ ಹುಝೂರ್ ಅನ್ವರ್(ಅತಬಅ) ಒಂದು ದಿವಸ ಮುಂಚೆಯೇ ನಿರ್ದೇಶನ ನೀಡಿದ್ದರು ಆಗ ಸಾಹಿಬ್ Humanity First ನ ಇನ್‌ಚಾರ್ಜ್ ಸಾಹಿಬ್ ಹೇಳಿದರು. ಆ ಬಕೆಟ್ ವಸ್ತುಪ್ರದರ್ಶನದ ಒಂದು ಭಾಗದಲ್ಲಿ ಇಡಲಾಗಿದೆ. ಇನ್‌ಚಾರ್ಜ್ ಸಾಹಿಬ್ ಮತ್ತು ಹೇಳಿದರು. ನಾವು ಈಗ Funk System ತಯಾರಿಸಿದ್ದೇವೆ. ಏಕೆಂದರೆ Disaster Relief ನಡುವೆಯೂ ಸಂಪರ್ಕ ಸಾಧಿಸಬಹುದಾಗಿದೆ. ಯಾವುದೇ ಕಾರಣದಿಂದ ಟೆಲಿಫೋನ್ ವ್ಯವಸ್ಥೆ ನಿಂತು ಹೋದರೆ ಆಗಲೂ ಈ ವ್ಯವಸ್ಥೆಯನ್ವಯ ಪರಸ್ಪರ ಸಂಪರ್ಕ ಸ್ಥಾಪಿಸಬಹುದು.

ಅನಂತರ ಹುಝೂರ್ ಅನ್ವರ್(ಅತಬಅ) ತಮ್ಮ ವಸತಿಯತ್ತ ತೆರಳಿದರು.

ಕಾರ್ಯಕ್ರಮದನ್ವಯ 9 ಗಂಟೆಗೆ ಹುಝೂರ್ ಅನ್ವರ್ ಜಲ್ಸದೊಳಗೆ ಆಗಮಿಸಿದರು ಮತ್ತು ಮಗ್ರಿಬ್ ಇಶಾ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟರು. ನಮಾಝ್ ನಂತರ ಹುಝೂರ್ ಅನ್ವರ್ ತಮ್ಮ ವಸತಿಯತ್ತ ತೆರಳಿದರು.

ಮಸ್ಜಿದ್ ಮುಬಾರಕ್ "FLORSTADT ನ ಉದ್ಘಾಟನೆ 28 ಆಗಸ್ಟ್ 2023 ಕ್ಕೆ ಆಗಿತ್ತು. ಕ್ಷೇತ್ರೀಯ ಪ್ರಿಂಟ್ ಮೀಡಿಯಾ ಅದಕ್ಕೆ ಹೀಗೆ coverage ನೀಡಿದ್ದರು.

wetherauen zeitung ಪತ್ರಿಕೆ ತನ್ನ ಸಂಚಿಕೆಯಲ್ಲಿ ಹೀಗೆ ಬರೆಯಿತು: ಹಝ್‌ರತ್ ಮಿರ್ಝಾ ಮಸ್ರೂರ್ ಅಹ್ಮದ್ ಸಾಹಿಬ್ ಮಸ್ಜಿದ್ ಸ್ಥಾಪನೆಯ ಉದ್ದೇಶ ವಿವರಿಸಿದರು. ವಾಸ್ತವವಾಗಿ ಹೇಳಬಹುದಾದರೆ ಮಸೀದಿಯು ವಿವಿಧ ಸಮುದಾಯಗಳಲ್ಲಿ ಮತ್ತು ವಿವಿಧ ಧರ್ಮಗಳ ಜನರ ನಡುವೆ ಶಾಂತಿ ಉಂಟಾಗುವಂತಾಗಬೇಕು. ಈ ಪತ್ರಿಕೆಯು ಒಂದು ಲಕ್ಷ 12 ಸಾವಿರ ಜನರವರೆಗೆ ತಲುಪುತ್ತದೆ.

ಅದಲ್ಲದೆ Kmeis Amzeigen ಪತ್ರಿಕೆ ಮತ್ತು Frankfurten Neue Presse ಪತ್ರಿಕೆಗಳು ಸಹ ಮಸೀದಿಯ ಉದ್ಘಾಟನೆ ಕುರಿತು ಸುದ್ದಿ ನೀಡಿದ್ದರು. ಈ ಎರಡೂ ಪತ್ರಿಕೆಗಳ ಪ್ರಕಟಣೆ 74,300 ಆಗಿದೆ. ಈ ರೀತಿ ಒಟ್ಟಿನಲ್ಲಿ ಈ ಮೂರು ಪತ್ರಿಕೆಗಳ ಪ್ರಸಾರ ಒಂದು ಲಕ್ಷ 86 ಸಾವಿರ 300 ಆಗಿದೆ.

ಅದಲ್ಲದೇ TV HR-Fernshen ನ ಕಾರ್ಯಕ್ರಮ Hessenschau ನಲ್ಲಿ ಮಸೀದಿಯ ಉದ್ಘಾಟನಾ ನಿಮಿತ್ತ ಈ ಕೆಳಗಿನಂತೆ ಸುದ್ದಿ ಪ್ರಸಾರ ಮಾಡಲಾಗಿತ್ತು.

Florstadt ನಗರದಲ್ಲಿ ಅಹ್ಮದಿಯಾ ಮುಸ್ಲಿಂ ಜಮಾಅತ್‌ನ ಉದ್ಘಾಟನಾ ಸಮಯದಲ್ಲಿ ಉನ್ನತ ಮಟ್ಟದ ಅತಿಥಿಗಳು ಆಗಮಿಸಿದ್ದರು. ಖಲೀಫರಾದ ಹಝ್‌ರತ್ ಮಿರ್ಝಾ ಮಸ್ರೂರ್ ಅಹ್ಮದ್ ಸಾಹಿಬ್ ಮಸೀದಿಯನ್ನು ಉದ್ಘಾಟಿಸಿದರು. ಕೆಲವು ತಿಂಗಳುಗಳ ಹಿಂದೆ ಅಷ್ಟೇ ಈ ಮಸೀದಿ ಪೂರ್ಣಗೊಂಡಿತ್ತು.

ಲೋಕದಾದ್ಯಂತದಿಂದ 10 ಮಿಲಿಯನ್‌ಗಿಂತ ಹೆಚ್ಚು ಮುಸ್ಲಿಮರ ಆಧ್ಯಾತ್ಮಿಕ ನೇತಾರರು ಇಂದಿನ ದಿನಗಳಲ್ಲಿ ಜಲ್ಸ ಸಾಲಾನ ಉದ್ದೇಶವಾಗಿ ಈ ವಾರದಲ್ಲಿ Stuttgart ನಲ್ಲಿ ಆಯೋಜಿಸಲಳಾದ ಸ್ಥಳಕ್ಕೆ ಆಗಮಿಸಿದ್ದಾರೆ.

**(ಮುಂದುವರಿಯುವುದು)**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**

**NATIONAL TOLL FREE : 1800-103-2131**

**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**

**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.